# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಗುರುವಾರ, ಜೂನ್ 17, 2021

ಸಂಪುಟ : 48 ಸಂಚಿಕೆ : 34 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com




**90ರ ಸಂಭ್ರಮದಲ್ಲಿ ಎಸ್ಸೆಸ್** ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರ 90ನೇ ವರ್ಷದ ಜನ್ಮ ದಿನವನ್ನು ಬುಧವಾರ ಅವರ ಸ್ವಗೃಹದಲ್ಲಿ ಕುಟುಂಬದ ಸದಸ್ಯರು ಆಚರಿಸಿದರು.

## ತುಂಗಾ ಭರ್ತಿ, ಭದ್ರಾ ಒಳ ಹರಿವು ಹೆಚ್ಚಳ

ಶಿವಮೊಗ್ಗ, ಜೂ.16- ಮಲೆನಾಡಿನಲ್ಲಿ ಉತ್ತಮ ಮಳೆಯಾಗುತ್ತಿದ್ದು, ಗಾಜನೂರು ತುಂಗಾ ಜಲಾಶಯ ಭರ್ತಿಯಾಗಿದೆ.

ಸೋಮವಾರ ಸಂಜೆ 9,500 ಕ್ಯೂಸೆಕ್ಸ್ ನೀರನ್ನು ತುಂಗಭದ್ರಾ ನದಿಗೆ ಬಿಡಲಾಗಿದೆ. ಭದ್ರಾ ಜಲಾನಯನ ಪ್ರದೇಶದಲ್ಲೂ ಮಳೆ ಪ್ರಾರಂಭವಾಗಿದ್ದು, ಭದ್ರಾ ಜಲಾಶಯಕ್ಕೆ ಮಂಗಳವಾರ 6073 ಕ್ಯೂಸೆಕ್ಸ್ ಇದ್ದ ನೀರಿನ ಒಳಹರಿವು ಬುಧವಾರ 10,958 ಕ್ಯೂಸೆಕ್ಸ್‌ಗೆ ಏರಿಕೆಯಾಗಿದೆ.

ಜಲಾಶಯದ ನೀರಿನ ಮಟ್ಟ 142 ಅಡಿ 6 ಇಂಚು ಆಗಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ 8 ಅಡಿ 6 ಇಂಚು ನೀರು ಹೆಚ್ಚು ದಾಖಲಾಗಿದೆ. ಕಳೆದ ವರ್ಷ ಈ ದಿನ ಜಲಾಶಯದಲ್ಲಿ 134 ಅಡಿ ನೀರಿತ್ತು.

ಈ ಬಾರಿ ಮುಂಗಾರು ಮಳೆ ಆರಂಭದಲ್ಲಿ ಉತ್ತಮವಾಗಿದ್ದು, ಅಚ್ಚುಕಟ್ಟಿನ ರೈತರ ಮೊಗದಲ್ಲಿ ಮಂದಹಾಸ ಮೂಡಿಸಿದೆ.

## ನೇರ ತೆರಿಗೆ ಸಂಗ್ರಹ ದುಪ್ಪಟ್ಟು ಹೆಚ್ಚಳ

ನವದೆಹಲಿ, ಜೂ. 16 – ಪ್ರಸಕ್ತ ಹಣಕಾಸು ವರ್ಷದಲ್ಲಿ ನೇರ ತೆರಿಗೆ ಸಂಗ್ರಹ ಎರಡು ಪಟ್ಟು ಹೆಚ್ಚಾಗಿ 1.85 ಲಕ್ಷ ಕೋಟಿ ರೂ.ಗಳಿಗೆ ತಲುಪಿದೆ ಎಂದು ಆದಾಯ ತೆರಿಗೆ ಇಲಾಖೆ ತಿಳಿಸಿದೆ.

ವೈಯಕ್ತಿಕ ಆದಾಯ ತೆರಿಗೆ ಹಾಗೂ ಮುಂಗಡ ತೆರಿಗೆಯಿಂದಾಗಿ ಈ ಹೆಚ್ಚಳವಾಗಿದೆ. ಕಾರ್ಪೊರೇಟ್ ತೆರಿಗೆ (2ನೇ ಪುಟಕ್ಕೆ)

# ಕೊರೊನಾ ಇಳಿಕೆ

ದಾವಣಗೆರೆ, ಜು. 16 - ಜಿಲ್ಲೆಯಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಕಳೆದ ಕೆಲ ದಿನಗಳಿಂದ ಇಳಿಮುಖ ವಾಗುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ.

ರಾಜ್ಯದ ಹಲವು ಜಿಲ್ಲೆಗಳಲ್ಲಿ ಸೋಂಕಿತರ ಸಂಖ್ಯೆ ಕಡಿಮೆಯಾಗುತ್ತಿದ್ದರೂ ದಾವಣಗೆರೆ ಜಿಲ್ಲೆಯಲ್ಲಿ ಮಾತ್ರ ಹನ್ನೊಂದರೊಳಗೊಂದು ಎಂಬಂತೆ ಪಾಸಿಟಿವ್ ಕೇಸ್‌ಗಳು ಹೆಚ್ಚಾಗಿರುವ 11 ಜಿಲ್ಲೆಗಳಲ್ಲಿ ಒಂದಾಗಿತ್ತು.

ಕಳೆದ ಮೇ 30ರವರೆಗೆ ಸೋಂಕಿತರ ವಾರದ ಸರಾಸರಿ 705 ಇತ್ತು. ನಂತರ ಲಾಕ್‌ಡೌನ್ ಹಿನ್ನೆಲೆಯಲ್ಲಿ ಜೂ.15ರವರೆಗೆ ಸರಾಸರಿ 278ಕ್ಕೆ ಇಳಿಕೆಯಾಗಿತ್ತು. ಇದೇ ವೇಳೆ ಗುಣಮುಖರಾದವರ ಸರಾಸರಿ 300ರಷ್ಟಿತ್ತು.

**ಅತಿ ಹೆಚ್ಚು ಗುಣಮುಖ:** ಬುಧವಾರ 1094 ಜನ ಸೋಂಕಿತರ ಗುಣಮುಖದ ಬಗ್ಗೆ ವರದಿಯಾಗಿದ್ದು, ಒಂದೇ ದಿನ ಅತಿ ಹೆಚ್ಚು ಸಂಖ್ಯೆಯಲ್ಲಿ ಗುಣವಾದವರ ಸಂಖ್ಯೆ ಇದಾಗಿದೆ. ಈ ಹಿಂದೆ ಅಂದರೆ ಮೇ 30 ರಂದು 853 ಜನರು ಗುಣಮುಖರಾಗಿದ್ದರು. ಜೂನ್ ತಿಂಗಳ 15ನೇ ತಾರೀಖು ಅತಿ ಹೆಚ್ಚು ಅಂದರೆ 789 ಜನರು ಗುಣಮುಖರಾಗಿದ್ದರು. ಪರಿಣಾಮ ಸಕ್ರಿಯ ಸೋಂಕಿತರ ಸಂಖ್ಯೆ 2761ಕ್ಕೆ ಇಳಿಕೆಯಾಗಿದೆ. ಜೂನ್ 9ರಿಂದ 15ರವರೆಗೆ ಪಾಸಿಟಿವಿಟಿ ರೇಟ್ 5.6ರಷ್ಟಿದ್ದು, 16 ರಂದು 4.92ಕ್ಕೆ ಇಳಿಕೆಯಾಗಿದೆ.

ನಗರ ಪ್ರದೇಶದಲ್ಲಿ (2ನೇ ಪುಟಕ್ಕೆ)

### ಕಳೆದೊಂದು ವಾರದಲ್ಲಿ 48 ಜನ ಮೃತ

**ಸೋಂಕು ಕಡಿಮೆಯಾದರೂ ತಗ್ಗದ ಸಾವಿನ ಸರಣಿ**

ಕಳೆದೊಂದು ವಾರದಿಂದ ಸೋಂಕಿತರ ಸಂಖ್ಯೆ ಇಳಿಕೆಯಾಗುತ್ತಿದ್ದರೂ, ಸೋಂಕಿನಿಂದ ಸಾವನ್ನಪ್ಪುತ್ತಿರುವವರ ಸಂಖ್ಯೆ ಮಾತ್ರ ಕಡಿಮೆಯಾಗಿಲ್ಲ. ಕಳೆದೊಂದು ವಾರದಲ್ಲಿ 48 ಜನರು ಸೋಂಕಿನಿಂದ ಮೃತಪಟ್ಟಿದ್ದಾರೆ.

ಜನತೆ ತಡವಾಗಿ ಆಸ್ಪತ್ರೆಗೆ ದಾಖಲಾಗುತ್ತಿರುವುದೇ ಸಾವಿನ ಸಂಖ್ಯೆ ಹೆಚ್ಚುತ್ತಿರುವುದಕ್ಕೆ ಕಾರಣ ಎಂದು ಜಿಲ್ಲಾ ಸರ್ವೇಕ್ಷಣಾಧಿಕಾರಿ ರಾಘವನ್ ಹೇಳಿದ್ದಾರೆ.

ಗ್ರಾಮೀಣ ಭಾಗದಲ್ಲಿ ಶೀತ, ಕೆಮ್ಮು, ಜ್ವರ ಕಾಣಿಸಿಕೊಂಡರೆ ಜನ ಕೋವಿಡ್ ಟೆಸ್ಟ್ ಮಾಡಿಸಿಕೊಳ್ಳಲು ಮುಂದಾಗುತ್ತಿಲ್ಲ. ಟೆಸ್ಟ್ ಮಾಡಿಸಿಕೊಂಡರೆ ಪಾಸಿಟಿವ್ ಬರುತ್ತದೆ. ಆಸ್ಪತ್ರೆಗೆ ದಾಖಲಿಸಲು ಹೇಳುತ್ತೀರಿ. ಅಲ್ಲಿ ಬೆಡ್‌ಗಳು ಸಿಗದೆ ಕಷ್ಟ ಪಡಬೇಕಾಗುತ್ತದೆ ಎಂಬ ಮನೋಭಾವ ಜನರಲ್ಲಿರುವುದರಿಂದ ಟೆಸ್ಟ್ ಮಾಡಿಸಿಕೊಳ್ಳಲು ನಿರಾಕರಿಸುತ್ತಿದ್ದಾರೆ. (3ನೇ ಪುಟಕ್ಕೆ)

## ಜಿಲ್ಲೆಯಲ್ಲಿ 207 ಪಾಸಿಟಿವ್

**7 ಸಾವು, 1094 ಗುಣಮುಖ**

ದಾವಣಗೆರೆ, ಜು.16- ಜಿಲ್ಲೆಯಲ್ಲಿ 207 ಕೊರೊನಾ ಪಾಸಿಟಿವ್ ಪ್ರಕರಣಗಳು ಬುಧವಾರ ವರದಿಯಾಗಿವೆ. 7 ಜನರು ಸೋಂಕಿನಿಂದ ಮೃತ ಪಟ್ಟಿದ್ದು, 1094 ಜನರು ಗುಣಮುಖರಾಗಿರು ವುದಾಗಿ ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ

ದಾವಣಗೆರೆಯಲ್ಲಿ 101, ಹರಿಹರ 19, ಜಗಳೂರು 12, ಚನ್ನಗಿರಿ 37, ಹೊನ್ನಾಳಿ 27 ಹಾಗೂ ಹೊರ ಜಿಲ್ಲೆಯ 11 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. ದಾವಣಗೆರೆ ತಾಲ್ಲೂಕು ಅಣಬೇರು (2ನೇ ಪುಟಕ್ಕೆ)

# ಡಿಎಪಿ ಸಬ್ಸಿಡಿ 700 ರೂ. ಹೆಚ್ಚಿಸಲು ಸಂಪುಟದ ಅಸ್ತು

ನವದೆಹಲಿ, ಜೂ. 16 – ಡಿ.ಎ.ಪಿ. ರಸಗೊಬ್ಬರದ ಸಬ್ಸಿಡಿಯನ್ನು ಪ್ರತಿ ಚೀಲಕ್ಕೆ 700 ರೂ. ಹೆಚ್ಚಿಸಲು ಕೇಂದ್ರ ಸಂಪುಟ ಅನುಮೋದನೆ ನೀಡಿದೆ. ಇದರಿಂದಾಗಿ ಸರ್ಕಾರಕ್ಕೆ 14,775 ಕೋಟಿ ರೂ. ಹೊರೆಯಾಗಲಿದೆ. ಜಾಗತಿಕವಾಗಿ ರಸಗೊಬ್ಬರದ ಬೇಡಿಕೆ ಹೆಚ್ಚಾದರೂ, ರೈತರಿಗೆ ಕಡಿಮೆ ಬೆಲೆಯಲ್ಲಿ ಗೊಬ್ಬರ ಒದಗಿಸಲು ಸರ್ಕಾರ ಈ ಕ್ರಮ ತೆಗೆದುಕೊಂಡಿದೆ.

ಯೂರಿಯಾ ನಂತರ ಡಿಎಪಿ ರಸಗೊಬ್ಬರವನ್ನು ದೇಶದಲ್ಲಿ ವ್ಯಾಪಕವಾಗಿ ಬಳಸಲಾಗುತ್ತದೆ. ಡಿಎಪಿ ಗೊಬ್ಬರದ ಸಬ್ಸಿಡಿಯನ್ನು ಶೇ.140ರಷ್ಟು ಹೆಚ್ಚಿಸಲು ಕೇಂದ್ರ ಸರ್ಕಾರ ಕಳೆದ ತಿಂಗಳು ನಿರ್ಧರಿಸಿತ್ತು.

ಸಂಪುಟ ಸಭೆಯಲ್ಲಿ (2ನೇ ಪುಟಕ್ಕೆ)

## 2ನೇ ಅಲೆಯಲ್ಲಿ ಗರ್ಭಿಣಿಯರ ಮೇಲೆ ಹೆಚ್ಚು ಪರಿಣಾಮ

ನವದೆಹಲಿ ಜೂ. 16 – ಮೊದಲ ಅಲೆಗೆ ಹೋಲಿಸಿದರೆ ಎರಡನೇ ಅಲೆಯಲ್ಲಿ ಗರ್ಭಿಣಿಯರು ಹಾಗೂ ಬಾಣಂತಿಯರು ಕೊರೊನಾಗೆ ಸಿಲುಕುವ ಹಾಗೂ ಸಾವನ್ನಪ್ಪುವ ಪ್ರಮಾಣ ಹೆಚ್ಚಾಗಿದೆ ಎಂದು ಐ.ಸಿ.ಎಂ. ಆರ್. ಅಧ್ಯಯನ ತಿಳಿಸಿದೆ.

ಮೊದಲ ಅಲೆಯಲ್ಲಿ ರೋಗ ಲಕ್ಷಣಗಳು ಕಂಡು ಬಂದ ಗರ್ಭಿಣಿಯರು ಹಾಗೂ ಬಾಣಂತಿಯರ ಪ್ರಮಾಣ ಶೇ.14.2 ಆಗಿತ್ತು. ಎರಡನೇ ಅಲೆಯಲ್ಲಿ ಇದು ಶೇ.28.7ಕ್ಕೆ ಏರಿಕೆಯಾಗಿದೆ. ಮೊದಲ ಅಲೆಯಲ್ಲಿ ಸಾವಿನ ಪ್ರಮಾಣ ಶೇ 0.7 ಆಗಿತ್ತು. ಎರಡನೇ ಅಲೆಯಲ್ಲಿ ಅದು ಶೇ.5.7 ಆಗಿದೆ ಎಂದು ಐ.ಸಿ.ಎಂ.ಆರ್. ಹೇಳಿದೆ.

## ಹಿರಿಯರಿಗೆ ಶಿಫಾರಸ್ಸು ಮಾಡಿದ ಕೊರೊನಾ ಔಷಧ ಮಕ್ಕಳಿಗಿಲ್ಲ

ನವದೆಹಲಿ,ಜೂ. 16 – ವಯಸ್ಕರಲ್ಲಿ ಕೊರೊನಾ ಬಂದಾಗ ಶಿಫಾರಸ್ಸು ಮಾಡಲಾಗುತ್ತಿದ್ದ ಐವರ್‌ಮೆಕ್ಟಿನ್, ಹೈಡ್ರಾಕ್ಸಿಕ್ಲೋರೊಕ್ವೈನ್, ಫಾವಿಪಿರಾವಿರ್ ಹಾಗೂ ಆಂಟಿಬಯಾಟಿಕ್‌ಗಳಾದ ಡಾಕ್ಸಿಸೈಕ್ಲಿನ್ ಮತ್ತು ಅಜಿತ್ರೊಮೈಸಿನ್ ಅಂಥವನ್ನು ಮಕ್ಕಳಿಗೆ ಶಿಫಾರಸ್ಸು ಮಾಡಬಾರದು ಎಂದು ಕೇಂದ್ರ ಸರ್ಕಾರ ಮಾರ್ಗಸೂಚಿ ಪ್ರಕಟಿಸಿದೆ.

ಕೊರೊನಾ ಪ್ರಕರಣಗಳು ಹೆಚ್ಚಾಗುವ ಸಾಧ್ಯತೆ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಮಕ್ಕಳಿಗಾಗಿ ಕೊರೊನಾ ಕೇರ್ ಸೇವೆ ಆರಂಭಿಸಲು ಮಾರ್ಗಸೂಚಿಯಲ್ಲಿ ತಿಳಿಸಿದೆ.

ಈಗಿರುವ ಕೊರೊನಾ ಕೇರ್ ಸೌಲಭ್ಯಗಳನ್ನು ಬಳಸಿಕೊಂಡು ಮಕ್ಕಳಿಗೆ ಚಿಕಿತ್ಸೆ ನೀಡಬೇಕು ಎಂದು ತಿಳಿಸಲಾಗಿದೆ.

ಕೇಂದ್ರ ಆರೋಗ್ಯ ಸಚಿವಾಲಯ ಮಕ್ಕಳಲ್ಲಿ ಕೊರೊನಾ ಬಂದಾಗ ತೆಗೆದುಕೊಳ್ಳಬೇಕಾದ ಚಿಕಿತ್ಸೆ ಕುರಿತು ಮಾರ್ಗಸೂಚಿ ಪ್ರಕಟಿಸಿದೆ. ಐವರ್‌ಮೆಕ್ಟಿನ್, ಹೈಡ್ರಾಕ್ಸಿಕ್ಲೋರೊಕ್ವೈನ್, ಫಾವಿಪಿರಾವಿರ್ ಹಾಗೂ ಆಂಟಿಬಯಾಟಿಕ್ಸ್‌ಗಳಾದ ಡೊಕ್ಸಿಸೈಕ್ಲಿನ್ ಹಾಗೂ ಅಜಿತ್ರೊಮೈಸಿನ್‌ಗಳನ್ನು ಮಕ್ಕಳ ಮೇಲೆ (3ನೇ ಪುಟಕ್ಕೆ)

# 2.5 ಲಕ್ಷ ಸಾವಿನ ಸಂಖ್ಯೆ ಮುಚ್ಚಿಟ್ಟ ಸರ್ಕಾರ

### ಕೊರೊನಾ ಸಾವು 33 ಸಾವಿರವಾದರೆ ಉಳಿದ 3 ಲಕ್ಷ ಸಹಜ ಸಾವೇ?: ಪಾಟೀಲ್

ಬೆಂಗಳೂರು, ಜೂ.16 - ಕೊರೊನಾ ಸಂದರ್ಭದಲ್ಲಿ ರಾಜ್ಯ ಸರ್ಕಾರ ಎರಡೂವರೆ ಲಕ್ಷ ಸಾವಿನ ಸಂಖ್ಯೆಗಳನ್ನು ಮುಚ್ಚಿಟ್ಟಿದೆ ಎಂದು ಮಾಜಿ ಸಚಿವ ಹೆಚ್.ಕೆ.ಪಾಟೀಲ್ ಗಂಭೀರ ಆರೋಪ ಮಾಡಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜನವರಿಯಿಂದ ಇಂದಿನವರೆಗೂ ಕೊರೊನಾದಿಂದ 33,033 ಜನ ಸಾವನ್ನಪ್ಪಿದ್ದಾರೆ ಎಂದು ರಾಜ್ಯ ಸರ್ಕಾರ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದೆ.

ಲಭ್ಯ ಇರುವ ಮಾಹಿತಿಯ ಪ್ರಕಾರ ರಾಜ್ಯದಲ್ಲಿ ಜನವರಿಂದ ಜೂನ್ ತಿಂಗಳವರೆಗೆ ಒಟ್ಟು 3,27,985 ಸಾವುಗಳು ಸಂಭವಿಸಿವೆ ಎಂದು ಸರ್ಕಾರವೇ ತಿಳಿಸಿದೆ. ಕೋವಿಡ್ ನಿಂದ ಮೃತ ಪಟ್ಟವರ ಸಂಖ್ಯೆ 33 ಸಾವಿರ ಮಾತ್ರವಾದರೆ, ಉಳಿದ 3 ಲಕ್ಷ ಸಹಜ ಸಾವುಗಳಾಗಿವೆಯೇ? ಎಂದು ಪ್ರಶ್ನಿಸಿದರು.

ಕೊರೊನಾ ಆರಂಭವಾದ ನಂತರ ಡೆತ್ ಆಡಿಟ್ ಮಾಹಿತಿಯನ್ನು ಹಾಗೂ ಅಂಕಿ-ಅಂಶಗಳು ಬಹಿರಂಗವಾಗದಂತೆ ಸರ್ಕಾರ ತಡೆ ಹಿಡಿದಿದೆ. ನಮ್ಮ ಬಳಿ 2018-19ರ



**ಸರ್ಕಾರ ಸಾವಿನ ಸತ್ಯ ಮುಚ್ಚಿಟ್ಟು ಸುಳ್ಳಿನ ಗೋಪುರ ಕಟ್ಟುತ್ತಿದೆ. ಅದನ್ನು ಹೈಕೋರ್ಟ್ ಹಾಲಿ ನ್ಯಾಯಾಧೀಶರಿಂದ ತನಿಖೆ ನಡೆಸಬೇಕು ಮತ್ತು ವಾಸ್ತವಿಕ ಮಾಹಿತಿಯ ಶ್ವೇತಪತ್ರವನ್ನು ಪ್ರಕಟಿಸಬೇಕು.**

ಜನವರಿಯಿಂದ ಜೂನ್‌ವರೆಗೆ 88 ಸಾವಿರ ಸಾವುಗಳಾಗಿದ್ದವು.

ಈ ವರ್ಷ 3.27 ಲಕ್ಷಕ್ಕೂ ಹೆಚ್ಚಿನ ಸಾವುಗಳಾಗಿವೆ. ಸರ್ಕಾರದ ಮಾಹಿತಿಯನ್ನು ಅವಲೋಕಿಸಿದರೆ ಎರಡೂವರೆ ಲಕ್ಷಕ್ಕೂ ಹೆಚ್ಚಿನ ಸಾವುಗಳ ಸಂಖ್ಯೆಯನ್ನು ಸರ್ಕಾರ ಮುಚ್ಚಿಟ್ಟಿರುವುದು ಸ್ಪಷ್ಟವಾಗಿದೆ. ಇದು ಮನುಷ್ಯತ್ವದ ಲಕ್ಷಣ ಅಲ್ಲ. ಜನರಿಗೆ ಯಾಕೆ ಮೋಸ ಮಾಡುತ್ತಿದ್ದಾರೆ. ಪರಿಹಾರ ಪಡೆಯಲು ಮೃತಪಟ್ಟ ಕುಟುಂಬಗಳನ್ನು ವಂಚಿಸುವ ಕೆಲಸ ನಡೆಯುತ್ತಿದೆ ಎಂದು ಆರೋಪಿಸಿದರು.

2019-20ರ ನಂತರ ಮರಣದ ಮಾಹಿತಿಯನ್ನು ಪ್ರಕಟಿಸುವುದನ್ನೇ ನಿಲ್ಲಿಸಲಾಗಿದೆ. ಕೋವಿಡ್ ಸಂದರ್ಭದಲ್ಲಿ ಪಾರದರ್ಶಕವಾಗಿರಬೇಕಿತ್ತು. ಆದರೆ ಸರ್ಕಾರ ಅದನ್ನು ಮಾಡದೆ ಮುಚ್ಚಿಟ್ಟು ಮೋಸ ಮಾಡಿದೆ. ತಮ್ಮ ತಪ್ಪುಗಳನ್ನು ಮುಚ್ಚಿಟ್ಟುಕೊಳ್ಳಲು ಸರ್ಕಾರ ಇಂತಹ ಅಪರಾಧಿ ದುಸ್ಸಾಹಸಕ್ಕೆ ಕೈ ಹಾಕಿದೆ ಎಂದು ಅವರು ಆರೋಪಿಸಿದರು.

ರಾಜ್ಯದಲ್ಲಿ 81,289 ಮಕ್ಕಳಿಗೆ ಶೇ.8ರಷ್ಟು ಕೊರೊನಾ ಸೋಂಕು ತಗುಲಿದೆ. ಬೆಂಗಳೂರಿನಲ್ಲಿ 45 ಸಾವಿರ ಮಕ್ಕಳು ಸೋಂಕಿತರಾಗಿದ್ದರು. ಅವರಲ್ಲಿ ಶೇ.2ರಷ್ಟು ಮಕ್ಕಳು ಸಾವನ್ನಪ್ಪಿದ್ದಾರೆ. ಮೂರನೇ ಅಲೆ ಮಕ್ಕಳ ಮೇಲೆ ಮತ್ತಷ್ಟು ಪರಿಣಾಮ ಬೀರಲಿದೆ ಎಂದು ವರದಿಗಳು ಹೇಳಿವೆ. ಸರ್ಕಾರ ಕೂಡಲೇ ಮಕ್ಕಳ ರಕ್ಷಣೆಗೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಸಾರ್ವಜನಿಕ ಲೆಕ್ಕಪತ್ರ ಸಮಿತಿ ಸೇರಿದಂತೆ ವಿಧಾನಸಭೆಯ ಅನೇಕ (3ನೇ ಪುಟಕ್ಕೆ)

## ಬಿಜೆಪಿಯವರು ಸ್ವಂತ ಹಣದಲ್ಲಿ ಲಸಿಕೆ ತಂದು ಫೋಟೋ ಹಾಕಿಕೊಳ್ಳಲಿ: ಎಸ್ಸೆಸ್



ದಾವಣಗೆರೆ, ಜೂ.16- ಬಿಜೆಪಿಯರು ಸರ್ಕಾರ ಕೊಡುವ ವಾಕ್ಸಿನ್‌ಗೆ ಫೋಟೋ ಹಾಕಿಕೊಳ್ಳುವುದನ್ನು ಬಿಟ್ಟು, ಸ್ವಂತ ಹಣದಲ್ಲಿ ಲಸಿಕೆ ತಂದು ಫೋಟೋ ಹಾಕಿಕೊಳ್ಳಲಿ ಎಂದು ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಚಾಟಿ ಬೀಸಿದ್ದಾರೆ.

ನಗರದ ಎಂ.ಸಿ.ಸಿ. 'ಬಿ' ಬ್ಲಾಕ್ ನ ಐಎಂಎ ಹಾಲ್ ನಲ್ಲಿ ಇಂದು ಏರ್ಪಾಡಾಗಿದ್ದ ನಗರ ಪಾಲಿಕೆಯ 38ನೇ ವಾರ್ಡಿನ ನಾಗರಿಕರಿಗೆ ಉಚಿತ ಕೋವಿಡ್ ಲಸಿಕೆ ಶಿಬಿರದಲ್ಲಿ ಪಾಲ್ಗೊಂಡಿದ್ದ ಸಂದರ್ಭದಲ್ಲಿ ತಮ್ಮನ್ನು ಭೇಟಿಯಾದ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

ಬಡವರಿಗೆ ಸಹಾಯ ಮಾಡಬೇಕೆಂಬ ಮನಸ್ಸು ಇದ್ದರೆ ಬಿಜೆಪಿಯವರು ಸ್ವಂತ ಹಣದಲ್ಲಿ ಲಸಿಕೆ ತಂದು ಜನತೆಗೆ ಹಾಕಿಸಲಿ. ನಾನು ಅವರಿಗೇಕೆ ಸಲಹೆ ಕೊಡೋಣ ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ (2ನೇ ಪುಟಕ್ಕೆ)

## ಸಹಾಯವಾಣಿ ಬಂದ್ ಆದೇಶ ವಾಪಸ್: ಸಿಎಂ ಭರವಸೆ

ಬೆಂಗಳೂರು, ಜೂ. 16 - ರಾಜ್ಯದ 74 ಮಹಿಳಾ ಸಾಂತ್ವನ ಸಹಾಯವಾಣಿಗಳನ್ನು ಬಂದ್ ಮಾಡಿರುವ ಆದೇಶ ಹಿಂತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಭರವಸೆ ನೀಡಿದ್ದಾರೆ.

ಕರ್ನಾಟಕ ರಾಜ್ಯ ಮಹಿಳಾ ಸಾಂತ್ವನ ಕೇಂದ್ರಗಳ ಒಕ್ಕೂಟದ ಪದಾಧಿಕಾರಿಗಳು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಮನವಿ ಮಾಡಿದ ಸಂದರ್ಭದಲ್ಲಿ ಕೂಡಲೇ ಆದೇಶ ಹಿಂತೆಗೆದು ತಿದ್ದುಪಡಿ ಆದೇಶ ಹೊರಡಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ನೊಂದ ಮಹಿಳೆಯರ ಸಾಂತ್ವನಕ್ಕಾಗಿ ಸ್ವತಃ ರಾಜ್ಯ ಸರ್ಕಾರ 2001ರಲ್ಲಿ ಸ್ವಯಂ ಸೇವಾ ಸಂಘ, ಸಂಸ್ಥೆಗಳ ಮೂಲಕ 194 ಮಹಿಳಾ ಸಾಂತ್ವನ ಸಹಾಯವಾಣಿಗಳನ್ನು ಆರಂಭಿಸಿತ್ತು. ತಲಾ (2ನೇ ಪುಟಕ್ಕೆ)

# ಸಚಿವರು-ಶಾಸಕರ ಜೊತೆ ಅರುಣ್ ಸಿಂಗ್ ಚರ್ಚೆ

ಬೆಂಗಳೂರು, ಜೂ.16- ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆ ವಿಚಾರಕ್ಕೆ ಅಂತ್ಯ ಹಾಡಲು ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ನಗರಕ್ಕೆ ಆಗಮಿಸಿ, ಪಕ್ಷದ ಸಚಿವರು ಹಾಗೂ ಮುಖಂಡರೊಟ್ಟಿಗೆ ಚರ್ಚೆ ಆರಂಭಿಸಿದ್ದಾರೆ.

ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಇಲ್ಲ ಎಂದು ಪದೇ ಪದೇ ಅರುಣ್‌ಸಿಂಗ್ ಹೇಳಿದ್ದರೂ ಕೂಡಾ ಸಚಿವರು ಮತ್ತು ಶಾಸಕರು ನಾಯಕತ್ವದ ವಿರುದ್ಧ ಅಪಸ್ವರ ಎತ್ತಿದ್ದರ ಹಿನ್ನೆಲೆಯಲ್ಲಿ ಖುದ್ದು ಅಭಿಪ್ರಾಯ ಪಡೆಯಲು ಮೂರು ದಿನಗಳ ಕಾಲ ರಾಜ್ಯದಲ್ಲಿ ತಂಗಲಿದ್ದಾರೆ.

ಅರುಣ್ ಸಿಂಗ್ ರಂಗ ಪ್ರವೇಶ ಮಾಡುತ್ತಿದ್ದಂತೆ

**ಬಿಎಸ್‌ವೈ ಪರ-ವಿರೋಧಿ ಚಟುವಟಿಕೆಗಳು ಚುರುಕು**

ಮುಖ್ಯಮಂತ್ರಿ ಯಡಿಯೂರಪ್ಪ ಪರ ಮತ್ತು ವಿರೋಧದ ಬಿರುಸಿನ ಚಟುವಟಿಕೆಗಳು ಆರಂಭಗೊಂಡಿವೆ.

ಮುಖ್ಯಮಂತ್ರಿ ಬಣದವರು ಸಾರ್ವಜನಿಕವಾಗಿಯೇ ತಮ್ಮ ಅಭಿಪ್ರಾಯವನ್ನು ನಾಯಕನ ಪರವಾಗಿ ಹೇಳಿಕೆ ಮತ್ತು ಸಹಿ ಸಂಗ್ರಹ ಆರಂಭಿಸಿದ್ದರೆ, ವಿರೋಧಿ ಗುಂಪಿನವರು ಮಾತ್ರ ಯಾವುದನ್ನೂ ಬಹಿರಂಗಪಡಿಸಿಲ್ಲ.

ಪರ, ವಿರೋಧ ಬಣದ ಪ್ರಮುಖರೆಲ್ಲರಿಗೂ ಅರುಣ್‌ಸಿಂಗ್ ತಮ್ಮ ಭೇಟಿಗೆ ಅವಕಾಶ ಮಾಡಿಕೊಟ್ಟಿದ್ದಾರೆ.

ನಾವು ನಿಮ್ಮ ಪರ ಇದ್ದೇವೆ ಎಂದು ಮುಖ್ಯಮಂತ್ರಿಯವರಿಗೆ ತೋರಿಸಲು ಸಚಿವರು, ಶಾಸಕರುಗಳು ಬೆಳಗಿನಿಂದಲೇ ಯಡಿಯೂರಪ್ಪನವರನ್ನು ಭೇಟಿ ಮಾಡಿ ಬರುತ್ತಿದ್ದಾರೆ.

ಈ ಸಂದರ್ಭದಲ್ಲಿ ಮುಖ್ಯಮಂತ್ರಿಯವರು ನಾಯಕತ್ವ ಬದಲಾವಣೆ ಇಲ್ಲ. ನೀವ್ಯಾವುದನ್ನೂ ಚಿಂತೆ ಮಾಡಬೇಡಿ. ಮೌನವಾಗಿರಿ. ಹೇಳಿಕೆಗಳನ್ನು ಕೊಡಬೇಡಿ ಎಂದು ತಿಳಿ ಹೇಳಿ ಕಳುಹಿಸಿದ್ದಾರೆ.

ಮತ್ತೊಂದೆಡೆ ಪಂಚಾಯತ್ ರಾಜ್ ಸಚಿವ ಕೆ. ಎಸ್. ಈಶ್ವರಪ್ಪ ಮಾತ್ರ ತಮ್ಮ ಹಿಂದಿನ ದಾಟಿಯಲ್ಲೇ ಮುಖ್ಯಮಂತ್ರಿ ಬದಲಾವಣೆಗೆ (3ನೇ ಪುಟಕ್ಕೆ)

# ಲಸಿಕೆಯಲ್ಲಿ ಕರುವಿನ ಸೆರಮ್ ಬಳಕೆ ಎಂಬುದು ಸುಳ್ಳು

### ಕೋವ್ಯಾಕ್ಸಿನ್ ಕುರಿತು ಅಪಪ್ರಚಾರಕ್ಕೆ ಕೇಂದ್ರ, ಭಾರತ್ ಬಯೋಟೆಕ್ ಸ್ಪಷ್ಟನೆ

ನವದೆಹಲಿ, ಜೂ. 16 – ಭಾರತ್ ಬಯೋಟೆಕ್ ಉತ್ಪಾದಿಸುತ್ತಿರುವ ಕೊರೊನಾ ಲಸಿಕೆಯಲ್ಲಿ ನವಜಾತ ಕರುವಿನ ಸೆರಮ್ ಇಲ್ಲ ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಸ್ಪಷ್ಟಪಡಿಸಿದೆ.

ಲಸಿಕೆ ಉತ್ಪಾದನೆ ಪ್ರಕ್ರಿಯೆಯಲ್ಲಿ ಸೆರಮ್ ಇರುತ್ತದೆ. ಆದರೆ, ಅಂತಿಮ ಉತ್ಪನ್ನದಲ್ಲಿ ಅದರ ಅಂಶ ಇರುವುದಿಲ್ಲ. ಕೆಲ ಸಾಮಾಜಿಕ ಜಾಲತಾಣಗಳ ಪೋಸ್ಟ್‌ನಲ್ಲಿ ಕೋವ್ಯಾಕ್ಸಿನ್ ಕುರಿತು ತಿರುಚಿದ ಹಾಗೂ ತಪ್ಪು ಹೇಳಿಕೆ ನೀಡಲಾಗುತ್ತಿದೆ ಎಂದು ಸಚಿವಾಲಯ ತಿಳಿಸಿದೆ.

ವೈರೋ ಸೆಲ್‌ಗಳನ್ನು ಸಿದ್ಧಪಡಿಸಲು ಹಾಗೂ ಬೆಳೆಸಲು ಮಾತ್ರ ನವಜಾತ ಕರುವಿನ ಸೆರಮ್ ಬಳಸಲಾಗುತ್ತದೆ. ಹಸು ಹಾಗೂ ಇತರೆ ಪ್ರಾಣಿಗಳ ಸೆರಮ್ ಅನ್ನು ವೆರೋ ಸೆಲ್ ಬೆಳೆಸಲು ಜಾಗತಿಕವಾಗಿ ಬಳಸಲಾಗುತ್ತದೆ ಎಂದು ತಿಳಿಸಲಾಗಿದೆ.

ಪೋಲಿಯೋ, ರೇಬೀಸ್ ಹಾಗೂ ಇನ್‌ಫ್ಲುಯೆಂಜಾ ಸೇರಿದಂತೆ ಹಲವಾರು ಲಸಿಕೆಗಳ ಅಭಿವೃದ್ಧಿಗಾಗಿ ವೆರೋ ಸೆಲ್ ಬಳಸುವ ತಂತ್ರಜ್ಞಾನ ದಶಕಗಳಿಂದ ನಡೆದುಕೊಂಡು ಬಂದಿದೆ. ವೆರೋ ಸೆಲ್‌ಗಳನ್ನು ನಂತರದಲ್ಲಿ ನೀರು ಹಾಗೂ ರಾಸಾಯನಿಕಗಳಿಂದ ತೊಳೆಯಲಾಗುತ್ತದೆ. ಅಂತಿಮವಾಗಿ ನವಜಾತ ಕರುವಿನ ಸೆರಮ್ ಲಸಿಕೆಯಲ್ಲಿ ಉಳಿಯುವುದಿಲ್ಲ ಎಂದು ಸಚಿವಾಲಯ ಹೇಳಿದೆ.

ಕಾಂಗ್ರೆಸ್ ನಾಯಕ ಗೌರವ್ ಪಂಧಿ ಎಂಬುವವರು ಟ್ವೀಟ್ ಮಾಡಿ, ಕೋವ್ಯಾಕ್ಸಿನ್‌ನಲ್ಲಿ ನವಜಾತ ಕರುವಿನ ಸೆರಮ್ ಇದೆ ಎಂಬುದನ್ನು ಮಾಹಿತಿ ಹಕ್ಕು ಅರ್ಜಿಗೆ ತಿಳಿಸಲಾಗಿದೆ ಎಂದಿದ್ದರು.

ಈ ಬಗ್ಗೆ ಸ್ಪಷ್ಟನೆ ನೀಡಿರುವ ಭಾರತ್ ಬಯೋಟೆಕ್, ನವಜಾತ ಕರುವಿನ ಸೆರಮ್ ಅನ್ನು ಲಸಿಕೆ ಉತ್ಪಾದನೆಗೆ ಬಳಸಲಾಗುತ್ತದೆ. ಇದನ್ನು ಸೆಲ್‌ಗಳನ್ನು ಬೆಳೆಸಲು ಬಳಸಲಾಗುತ್ತದೆ. ಇವುಗಳನ್ನು ಕೊರೊನಾ ವೈರಸ್ ಬೆಳೆಸಲು ಇಲ್ಲವೇ ಅಂತಿಮ ಲಸಿಕೆಯಲ್ಲಿ ಬಳಸುವುದಿಲ್ಲ ಎಂದು ಹೇಳಿದೆ.

ಉನ್ನತವಾಗಿ ಶುದ್ಧೀಕರಿಸಿದ ಲಸಿಕೆಯಲ್ಲಿ ನಿಷ್ಕ್ರಿಯ ವೈರಸ್ ಮಾತ್ರ ಉಳಿದಿರುತ್ತದೆ. ಇದರ ಬೆರಕೆಗಳನ್ನು ತೆಗೆಯಲಾಗುತ್ತದೆ. ಕರುವಿನ ಸೆರಮ್ ಅನ್ನು ವ್ಯಾಪಕವಾಗಿ ಜಾಗತಿಕವಾಗಿ ದಶಕಗಳಿಂದ ಬಳಸಲಾ ಗುತ್ತಿದೆ. ಪಾರದರ್ಶಕವಾಗಿ ಈ ಬಗ್ಗೆ ದಾಖಲಿ ಸುತ್ತಾ ಬರಲಾಗುತ್ತಿದೆ ಎಂದು ಕಂಪನಿ ಹೇಳಿದೆ.

# ಕೊರೊನಾದಲ್ಲಿ ಹೆಚ್ಚಾದ ಸೈಬರ್ ವಸೂಲಿ

### ಹೊಸ ಇಂಟರ್‌ನೆಟ್ ಕಡೆ ಹೆಚ್ಚಿದ ಒಲವು

ಬ್ರಿಟಿಷ್ ಕೊಲಂಬಿಯಾ/ ಟೊರಾಂಟೋ (ಕೆನಡಾ), ಜೂ. 16 - ವಾಸ್ತವ ಜಗತ್ತು ಕೊರೊನಾದಿಂದ ಪೀಡಿಸಲ್ಪಡುತ್ತಿರುವಂತೆಯೇ, ಆನ್‌ಲೈನ್ ಜಗತ್ತು ಈಗ ರ್‍ಯಾನ್ ಸಮ್‌ವೇರ್ (ಹಣ ವಸೂಲಿಯ ತಂತ್ರಾಂಶ) ಕಾಟದಿಂದ ಬಳಲುತ್ತಿದೆ.

ಇತ್ತೀಚೆಗೆ ಕೊಲೊನಿಯಲ್ ಪೈಪ್‌ಲೈನ್ ಹಾಗೂ ಜೆಬಿಎಸ್ ಯುಎಸ್‌ಎ ಹೋಲ್ಡಿಂಗ್ಸ್ ಕಂಪನಿಗಳ ಮೇಲೆ ರ್‍ಯಾನ್‌ಸಮ್‌ವೇರ್ ದಾಳಿ ನಡೆದಿತ್ತು. ಇದು ಸಂಘಟಿತವಾದ ಸೈಬರ್ ದಾಳಿ ನಡೆಯುತ್ತಿರುವುದು ಮತ್ತು ಕಂಪನಿಗಳು ದಾಳಿ ಎದುರಿಸಲು ಪರದಾಡುತ್ತಿರುವುದನ್ನು ತೋರಿಸುತ್ತಿದೆ.

ಇದೆಲ್ಲದರ ಕಾರಣದಿಂದಾಗಿ ವಿಫಲವಾಗುತ್ತಿರುವ ಹಳೆಯ ಇಂಟರ್‌ನೆಟ್ ಬದಲು ಹೊಸ (3ನೇ ಪುಟಕ್ಕೆ)

### ಸೈಬರ್ ಅಪರಾಧ ಮೂರನೇ ದೊಡ್ಡ 'ಆರ್ಥಿಕತೆ'!

ಇತ್ತೀಚಿನ ದಿನಗಳಲ್ಲಿ ಇಂಟರ್‌ನೆಟ್‌ನಲ್ಲಿ ಸೈಬರ್ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿವೆ. ಸೈಬರ್ ಅಪರಾಧ ಅತ್ಯಂತ ಯಶಸ್ವೀ ಹಾಗೂ ಲಾಭದಾಯಕ ಉದ್ಯಮವಾಗಿದೆ. ಒಂದು ಅಂದಾಜಿನ ಪ್ರಕಾರ ಸೈಬರ್ ಅಪರಾಧಗಳ ವೆಚ್ಚ ಪ್ರತಿ ವರ್ಷ ಶೇ.15ರಷ್ಟು ಹೆಚ್ಚಾಗುತ್ತಿದೆ. 2025ರ ವೇಳೆಗೆ ಸೈಬರ್ ಅಪರಾಧಗಳ ಮೊತ್ತ 10.5 ಟ್ರಿಲಿಯನ್ ಡಾಲರ್‌ಗಳಿಗೆ ತಲುಪಲಿದೆ ಎಂದು ಅಂದಾಜಿಸಲಾಗುತ್ತಿದೆ. ಇದು ಅಮೆರಿಕ ಹಾಗೂ ಚೀನಾ ನಂತರ ವಿಶ್ವದ ಮೂರನೇ ಅತಿ ದೊಡ್ಡ 'ಆರ್ಥಿಕತೆ' ಆಗಲಿದೆ!

ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
ಪ್ರಸಾದ ದಾಸೋಹ
ಇಂದಿನ ಪ್ರಸಾದ ವಿತರಕರು
ಐಗೂರು ಪ್ರಭು ಇವರ ಹುಟ್ಟುಹಬ್ಬದ ಪ್ರಯುಕ್ತ ಐಗೂರು ದೊಡ್ಡಬಸಪ್ಪನವರ ಕುಟುಂಬ ವರ್ಗದವರ ಸೇವಾರ್ಥ
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

ಸೈಟುಗಳು ಮಾರಾಟಕ್ಕಿವೆ
ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ, ಹೊಸ ಬನಶಂಕರಿ ಲೇಔಟ್‌ನಲ್ಲಿ 40x70, 40x70 West ಅಕ್ಕಪಕ್ಕ 60 ಅಡಿ ರೋಡಿಗಿದೆ. 30x50 West, 30x50 East, 30x40 West 40 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

ಸೈಟು, ಮನೆ ಖರೀದಿಗೆ ಬೇಕಾಗಿದೆ
ಕೇವಲ (1/2 %) ಅರ್ಧ ಪರ್ಸೆಂಟ್ ಕಮೀಷನ್ ಗೆ ನಾವು ನಿಮ್ಮ ಸೈಟು, ಮನೆ ಮಾರಿಸಿಕೊಡುತ್ತೇವೆ.
ಕಿರಣ್ ಬೂಸ್ನೂರ್ : 98440-63409

ಕರ್ನಾಟಕ ಗೃಹಮಂಡಳಿಯಲ್ಲಿ ಮನೆ ಮತ್ತು ಸೈಟುಗಳು ಮಾರಾಟಕ್ಕಿವೆ
30x40 North ಮನೆ 33 ಲಕ್ಷಕ್ಕೆ, 30x40 North, 30x40 South, 40x60 East, 30x50 North, 30x50 West 60 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

ಮಹಿಳೆ ಬೇಕಾಗಿದ್ದಾರೆ
ಎಂ.ಸಿ.ಸಿ. 'ಬಿ' ಬ್ಲಾಕ್ ನಲ್ಲಿರುವ ಮನೆಯಲ್ಲಿ ಅಡುಗೆ ಮಾಡಲು ಲಿಂಗಾಯಿತ ಸಮಾಜದ ಮಹಿಳೆ ಬೇಕಾಗಿದ್ದಾರೆ. ಸಂಪರ್ಕಿಸಿ : ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ
ಮೊ. 78929 94856

ಅನ್ನವೇ ದೇವರು
ಕರುಣಾ ಜೀವ ಕಲ್ಯಾಣ ಟ್ರಸ್ಟ್
ಇಂದಿನ ಅನ್ನ ದಾಸೋಹ ದಾಸೋಹಿಗಳು
ಡಾ.ಲತಾ ಬಸಪ್ಪ, ಮಕ್ಕಳ ತಜ್ಞರು
ಡಾ.ಎನ್. ಬಸಪ್ಪ, ದಂತ ವೈದ್ಯರು,
ಬಾಪೂಜಿ ಡೆಂಟಲ್ ಕಾಲೇಜು, ದಾವಣಗೆರೆ.
ಧನ ಸಹಾಯ ಮಾಡುವವರು ಸಂಪರ್ಕಿಸಿ
91104 55199

ಮನೆ ಬಾಡಿಗೆಗೆ ಇದೆ
ಮಹಾಲಸ ನಿಲಯ 4ನೇ ಮೇನ್, 4ನೇ ಕ್ರಾಸ್, ವಿನೋಬನಗರ
Contact: 94488 73541
ಸುಬ್ಬರಾವ್ ವೆರ್ಣೇಕರ್
72598 76703

ಶಿಕ್ಷಕರು ಬೇಕಾಗಿದ್ದಾರೆ
BA. D.Ed./BA. B.Ed. ಹಾಗೂ B.Sc. B.Ed. ಆಗಿರುವ English, Mathematics and Science ವಿಷಯಗಳ ಬೋಧನೆ ಮಾಡುವ ನುರಿತ ಶಿಕ್ಷಕರು ಬೇಕಾಗಿದ್ದಾರೆ.
ಶ್ರೀಮಾತಾ ವಿದ್ಯಾಸಂಸ್ಥೆ (ರಿ.)
ನಂದಗೋಕುಲ ಆಂಗ್ಲಮಾಧ್ಯಮ ನರ್ಸರಿ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ,
ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, 6ನೇ ಕ್ರಾಸ್, ಹೊಸ ಆರ್‌ಟಿಒ ಆಫೀಸ್ ಹಿಂಭಾಗ, ದಾವಣಗೆರೆ.
ಮೊ. : 99640 17729

ಬಿಲ್ಡಿಂಗ್ ಮಾರಾಟಕ್ಕಿದೆ
ವೈಷ್ಣವಿ ನಿಲಯ, 3ನೇ ಬಸ್ ಸ್ಟಾಪ್, 10ನೇ ಕ್ರಾಸ್, ಟಿ.ಬಿ. ಬಡಾವಣೆ, ವಿದ್ಯಾನಗರ, ದಾವಣಗೆರೆ. 30x40 ಅಳತೆಯ (33 ಚದರ) 3 ಮಹಡಿ ಮನೆ ಮಾರಾಟಕ್ಕಿದೆ.
95387 56409, 93410 21209

ಬೇಕಾಗಿದ್ದಾರೆ
ಪ್ರತಿದಿನ ಬೆಳಿಗ್ಗೆ 8.30 ರಿಂದ ಸಂಜೆ 5.30 ರವರೆಗೆ ಅಥವಾ ಸಂಜೆ 5.30 ರಿಂದ ಬೆಳಿಗ್ಗೆ 8.30 ರವರೆಗೆ ಅಥವಾ ದಿನದ 24 ಗಂಟೆಯೂ ವಯಸ್ಸಾದವರನ್ನು ನೋಡಿಕೊಳ್ಳಲು ಹೆಣ್ಣುಮಕ್ಕಳು ಬೇಕಾಗಿದ್ದಾರೆ.
ಮೊ. : 63639-54459
ಊಟ, ವಸತಿ ಸೌಲಭ್ಯವಿರುತ್ತದೆ.

ನಿಮ್ಮ ಮನೆಯಲ್ಲಿ ನೀರು ಸೋರುತ್ತಿದೆಯೇ ?
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗುವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್ - 96065 57066

ಮನೆ ಮಾರಾಟಕ್ಕಿದೆ
ಮೌನೇಶ್ವರ ಬಡಾವಣೆ, ನಿಟುವಳ್ಳಿಯಲ್ಲಿ 30x45, ಅಳತೆಯ ಡ್ಯೂಪ್ಲೆಕ್ಸ್ ಮನೆ, ಕಾರ್ ಪಾರ್ಕಿಂಗ್, 4 ಬೆಡ್ ರೂಂ, ಬೋರ್/ಮುನ್ಸಿಪಲ್ ನೀರಿನ ವ್ಯವಸ್ಥೆ ಹಾಗೂ ವಾಸ್ತು ಪ್ರಕಾರ ಇರುವ 27 ಚದುರಡಿ ಮನೆ ಮಾರಾಟಕ್ಕಿದೆ.
ಫೋ. : 99017 19991

ಸಾವಯವ ಗೊಬ್ಬರ ಸಿಗುತ್ತದೆ
ನಮ್ಮಲ್ಲಿ ಅಲ್ಪಾವಧಿ ಹಾಗೂ ದೀರ್ಘಾವಧಿ ಎಲ್ಲಾ ಬೆಳೆಗಳಿಗೆ ಉತ್ತಮವಾದ ಸಾವಯವ ಗೊಬ್ಬರ ಸಿಗುತ್ತದೆ.
ಮೊ : 81974 92172

ಮನೆಯ ನೀರಿನ ತೊಟ್ಟಿ, ಟ್ಯಾಂಕುಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
9986361250
9113285992

ನೀವು ರಾಜಕೀಯದಲ್ಲಿ ಉನ್ನತ ಯಶಸ್ಸು ಕಾಣುವ ಹಂಬಲದಲ್ಲಿದ್ದೀರಾ? ಹಾಗಾದರೆ ನಮ್ಮನ್ನು ಸಂಪರ್ಕಿಸಿ.
ಸಾಂದೀಪನಿ ತಂತ್ರ ಸಾಧಕರು
76767 50280

ಜಮೀನು ಮಾರಾಟಕ್ಕಿದೆ
ಮಿಟ್ಲಕಟ್ಟಿ ರಿ.ಸ.ನಂ 7/16 ರಲ್ಲಿ 17 ಗುಂಟೆ ಜಮೀನು ಮಾರಾಟಕ್ಕಿದೆ. ಮೇನ್ ರೋಡ್ ಪಕ್ಕ ಶ್ಯಾಮನೂರಿನಿಂದ 3 ಕಿಲೋ ಮೀಟರ್, ಮಿಟ್ಲಕಟ್ಟೆ
98443 60459, 87220 14318
95352 69849

ಸಸಿಗಳು ದೊರೆಯುತ್ತವೆ
ನಮ್ಮಲ್ಲಿ ಉತ್ತಮ ತಳಿಯ ತೆಂಗು, ಅಡಿಕೆ, ಮಾವು, ಸಪೋಟಾ, ಬೆಟ್ಟದ ನೆಲ್ಲಿ, ತೇಗ, ಸಿಲ್ವರ್, ಹೆಬ್ಬೇವು, ಶ್ರೀಗಂಧ, ಗುಲಾಬಿ ಹಾಗೂ ಇತರೆ ಸಸಿಗಳು ದೊರೆಯುತ್ತವೆ. ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ.
ಸುಬ್ರಮಣಿ ಆಗ್ರೋಟೆಕ್
ಶಕ್ತಿನಗರ, ನಿಟುವಳ್ಳಿ, ದಾವಣಗೆರೆ.
94484 39639, 63665 96479

ಬೇಕಾಗಿದ್ದಾರೆ
ಪೈಪ್ ಡಿಸ್ಟ್ರಿಬ್ಯೂಷನ್ ನಲ್ಲಿ ಕೆಲಸ ಮಾಡಲು ಅಕೌಂಟೆಂಟ್ ಮತ್ತು 5000 sq.ft. ಗೋಡೌನ್ ಕೆ.ಆರ್.ರಸ್ತೆ ಅಥವಾ ಎ.ಪಿ.ಎಂ.ಸಿ. ಸುತ್ತಮುತ್ತ ಬೇಕಾಗಿದೆ. ಸಂಪರ್ಕಿಸಿ
7406396332, 7406740635

WANTED
Principal (Retd Only)
Experienced Lectureres Economics & Statistics
PCM & CBZ High School Experienced
Admission Started. LKG to IInd PUC
ST. MARY'S PU COLLEGE,
Vinobanagar, Davangere.
PH : 94497 02778, 94819 09493

JOBS
MCS ACADEMY
Training &
Placement Cell
98444 92888



ನಗರಸಭಾ ಕಾರ್ಯಾಲಯ, ಹರಿಹರ–577601.
ಫೋ:08192–244266 ಫ್ಯಾಕ್ಸ್:08192–241024
Website:www.hariharcity.mrc.gov.in.
E-mail ID no:itstaff_ulb_harihara@yahoo.com
ನಸಹ/ತಾಂತ್ರಿಕ/ಸಿಆರ್–29/2021–22 ದಿನಾಂಕ: 10.06.2021

**ಕೊಟೇಷನ್**

ವಿಷಯ:– ಹರಿಹರ ನಗರಸಭೆ ವ್ಯಾಪ್ತಿಗೆ ಬರುವ ಎಸ್.ಟಿ.ಪಿ. ಪ್ಲಾಂಟ್‌ನಲ್ಲಿ 70 ಹೆಚ್.ಟಿ. ಲಿಫ್ಟಿಂಗ್ ಮೋಟಾರ್ ದುರಸ್ಥಿ & 3 ಫೇಸ್ ಆಟೋ ಟ್ರಾನ್ಸ್‌ಫಾರ್ಮರ್ ಹಾಗೂ ಕೇಬಲ್ ಅಳವಡಿಸುವುದು.

ನಗರಸಭೆ ವತಿಯಿಂದ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಎಸ್.ಟಿ.ಪಿ. ಫ್ಲಾಂಟ್‌ನಲ್ಲಿ 70 ಹೆಚ್.ಟಿ. ಲಿಫ್ಟಿಂಗ್ ಮೋಟಾರ್ ದುರಸ್ಥಿ & 3 ಫೇಸ್ ಆಟೋ ಟ್ರಾನ್ಸ್‌ಫಾರ್ಮರ್ ಹಾಗೂ ಕೇಬಲ್ ಅಳವಡಿಸುವ ಕಾಮಗಾರಿಗೆ ತಮ್ಮ ದರಗಳನ್ನು ಆಸಕ್ತಿಯುಳ್ಳ ಗುತ್ತಿಗೆದಾರರು ದರಪಟ್ಟಿಯ ವಿವರವನ್ನು ನಗರಸಭೆ ತಾಂತ್ರಿಕ ಶಾಖೆಯಲ್ಲಿ ಈ ಕೆಳಕಂಡ ಕಾಮಗಾರಿಗೆ ಸಂಬಂಧಪಟ್ಟ ಅಭಿಯಂತರರಿಂದ ತೆಗೆದುಕೊಂಡು ತಮ್ಮ ತಮ್ಮ ದರಗಳನ್ನು ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ದಿನಾಂಕ: 17.06.2021ರ ಸಾಯಂಕಾಲ 5.00 ಗಂಟೆಯೊಳಗೆ ಸೀಲು ಮಾಡಿದ ಲಕೋಟೆಯಲ್ಲಿ ಸಲ್ಲಿಸುವುದು ವೇಳೆ ಮೀರಿ ಬರವ ದರಪಟ್ಟಿಗಳನ್ನು ಅಂಗೀಕರಿಸಲಾಗುವುದಿಲ್ಲ.

| ಕ್ರ ಸಂ | ಕಾಮಗಾರಿ ವಿವರ | Unit | ಸಲ್ಲಿಸಬೇಕಾದ ದರ |
|---|---|---|---|
| 1 | Fixinng of Bush, Lifting and Erection of 70 HP No.3 Motor at STP Plant | 01 | |
| 2 | Rewinding of 3 phase auto transformer including fixing charges (V.440 Volts, Tapping 60-70-80-100.100%) | 01 | |
| 3 | Fixing of Over Load relay (0-100 Amps) L and T Make | 01 | |
| 4 | Timer Unit | 01 | |
| 5 | 25 Sq mm 4 core Including Fixing Charges | /mtr | |

ವಾಸಾಇ/ದಾವಣಗೆರೆ/149/ಎಂಸಿಎ/2021–22
ಸಹಿ/– ಪೌರಾಯುಕ್ತರು, ನಗರಸಭೆ, ಹರಿಹರ.


# ಮುಂಗಾರು ಹಂಗಾಮಿನಲ್ಲಿ 48,985 ಹೆಕ್ಟೇರ್ ಬಿತ್ತನೆ ಗುರಿ

**ಹೊನ್ನಾಳಿ ತಾಲ್ಲೂಕು**

ಹೊನ್ನಾಳಿ, ಜೂ.16- 2021-22 ನೇ ಸಾಲಿನಲ್ಲಿ ತಾಲ್ಲೂಕಿನ ವಾರ್ಷಿಕ ವಾಡಿಕೆ ಮಳೆ 703 ಮಿ.ಮೀ. ಇದ್ದು, ಹೊನ್ನಾಳಿ ತಾಲ್ಲೂಕಿನಲ್ಲಿ ಜೂನ್ ಅಂತ್ಯಕ್ಕೆ 156.3 ಮಿ.ಮೀ. ವಾಡಿಕೆಗೆ ವಾಸ್ತವವಾಗಿ ಒಟ್ಟು 181.0 ಮಿ.ಮೀ. ಮಳೆ ಆಗಿದೆ. ಶೇ.16 ರಷ್ಟು ಹೆಚ್ಚಿನ ಮಳೆಯಾಗಿದೆ ಎಂದು ಕೃಷಿ ಇಲಾಖೆ ಮಾಹಿತಿ ನೀಡಿದೆ.

ನ್ಯಾಮತಿ ತಾಲ್ಲೂಕಿನಲ್ಲಿ 171.4 ಮಿ.ಮೀ. ವಾಡಿಕೆಗೆ 246.7 ಮಿ.ಮೀ. ಮಳೆಯಾಗಿದ್ದು, ಶೇ. 44ರಷ್ಟು ಹೆಚ್ಚು ಮಳೆಯಾಗಿದೆ. ಮುಂಗಾರು ಹಂಗಾಮಿನ ಬಿತ್ತನೆ ಕಾರ್ಯ ಭರದಿಂದ ಸಾಗುತ್ತಿದೆ.

ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ ಒಟ್ಟಾರೆ ಬಿತ್ತನೆ ಕ್ಷೇತ್ರ 48,985 ಹೆಕ್ಟೇರ್ ಗುರಿ ಇದ್ದು, ಒಟ್ಟು 5,746 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಆಗಿದೆ. ಪ್ರಸಕ್ತ ಸಾಲಿನಲ್ಲಿ 9,000 ಎಕರೆ ಪ್ರದೇಶಕ್ಕೂ ಹೆಚ್ಚಿನ ಕ್ಷೇತ್ರದಲ್ಲಿ ತೊಗರಿ ವಿಸ್ತೀರ್ಣ ಗುರಿ ಹೊಂದ ಲಾಗಿದ್ದು, ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ ಯಡಿ 4,650 ತೊಗರಿ ಕಿಟ್ (4 ಕೆಜಿ) ಉಚಿತವಾಗಿ ರೈತರಿಗೆ 32 ಹಳ್ಳಿಗಳಲ್ಲಿ ವಿತರಿಸಲಾಗಿದೆ.

ಈ ಸಾಲಿನ ರಸಗೊಬ್ಬರ ಬೇಡಿಕೆ (ಏಪ್ರಿಲ್ ರಿಂದ ಜೂನ್ ಮಾಹೆಯವರೆಗೆ) 17, 672 ಮೆಟ್ರಿಕ್ ಟನ್‌ಗಳು ಇದ್ದು, ಈಗಾಗಲೇ 13,462 ಮೆಟ್ರಿಕ್ ಟನ್‌ನಷ್ಟು ವಿತರಣೆಯಾಗಿದೆ. ಜೂನ್‌ನಲ್ಲಿ 9,909 ಮೆಟ್ರಿಕ್ ಟನ್‌ಗಳ ಬೇಡಿಕೆ ಇದ್ದು, ಸಾಕಷ್ಟು ಪ್ರಮಾಣದಲ್ಲಿ ರಸಗೊಬ್ಬರ ದಾಸ್ತಾನಿದೆ.

ಈ ಸಾಲಿನ ಗುಣ ನಿಯಂತ್ರಣ ಕಾರ್ಯಕ್ರಮದಡಿ ಬಿತ್ತನೆ ಬೀಜ-146 ಮಾದರಿ, ರಸಗೊಬ್ಬರ-56 ಮಾದರಿ, ಕೀಟ ನಾಶಕ-30 ಮಾದರಿ ತೆಗೆಯಲಾಗಿದ್ದು, ವಿಶ್ಲೇಷಣೆಗೆ ಸಲ್ಲಿಸಲಾಗಿದೆ. ಅತಿವೃಷ್ಟಿಯಿಂದ ಹೊನ್ನಾಳಿ ತಾಲ್ಲೂ ಕಿನಲ್ಲಿ ಒಟ್ಟು 3 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿ ಯಾಗಿದೆ. ಬೆಳೆ ಪರಿಹಾರ ನೀಡಲು ಕ್ರಮ ವಹಿಸಲಾಗಿರುತ್ತದೆ.

ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ ಅಡಿಯಲ್ಲಿ ಒಟ್ಟಾರೆ 33,281 ಘೋಷಣೆಗಳು ರಚನೆಯಾಗಿವೆ. ಅಲ್ಲದೆ 73 ಪ್ರಕರಣಗಳು ಭೂಮಿ ಹೊಂದಾಣಿಕೆಯಾಗದ ಪ್ರಕರಣಗಳು ವರದಿಯಾಗಿದ್ದು, ಕೇಂದ್ರ ಕಚೇರಿಗೆ ಸರಿಪಡಿಸಲು ಪ್ರಸ್ತಾವನೆ ಸಲ್ಲಿಸಲಾಗಿದೆ.

ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಒಟ್ಟು 35,000 ಮಾನವ ದಿನಗ ಳನ್ನು ಸೃಜಿಸಲಾಗಿದೆ. (ಈ ಯೋಜನೆಯಡಿ ಕ್ಷೇತ್ರ ಬದು ನಿರ್ಮಾಣ, ಕೃಷಿ ಹೊಂಡ, ರಿವಿಟ್‌ಮೆಂಟ್ ಕಾಮಗಾರಿಗಳನ್ನು ಅನುಷ್ಠಾನ ಮಾಡಲಾಗುತ್ತಿದೆ).

# ಚುನಾವಣೆಯಲ್ಲಿ ಬಿಜೆಪಿ ತಿರಸ್ಕೃತವಾಗುವುದು ಸೂರ್ಯನಷ್ಟೇ ಸತ್ಯ

**ಹರಿಹರದ ಶಾಸಕ ಎಸ್. ರಾಮಪ್ಪ ಭವಿಷ್ಯ**

ಮಲೇಬೆನ್ನೂರು, ಜೂ.16- ಪೆಟ್ರೋಲ್,ಡೀಸೆಲ್, ಅಡುಗೆ ಅನಿಲ, ಅಡುಗೆ ಎಣ್ಣೆ ಸೇರಿದಂತೆ ಅಗತ್ಯ ವಸ್ತುಗಳ ಬೆಲೆಗಳನ್ನು ಏರಿಸಿರುವ ಕೇಂದ್ರ ಸರ್ಕಾರದ ವಿರುದ್ಧ ಹರಿಹರ ತಾಲ್ಲೂಕಿನಲ್ಲಿ ಪ್ರತಿಭಟನೆ ಮುಂದುವರೆದಿದೆ.

ಶನಿವಾರ ಹರಿಹರದಲ್ಲಿ, ಭಾನುವಾರ ಮಲೇಬೆನ್ನೂರು, ಬೆಳ್ಳೂಡಿಯಲ್ಲಿ ಪ್ರತಿಭಟನೆ ನಡೆಸಿದ್ದ ಕಾಂಗ್ರೆಸ್ ಪಕ್ಷವು, ಸೋಮವಾರ ಕೊಮಾರನಹಳ್ಳಿ, ಹಾಲಿವಾಣ, ಕೊಕ್ಕನೂರು, ಉಕ್ಕಡಗಾತ್ರಿ, ಯಲವಟ್ಟಿ ಮತ್ತು ಸಾರಥಿ ಗ್ರಾಮಗಳಲ್ಲೂ ಪ್ರತಿಭಟನೆ ನಡೆಸಿತು.

ಕೊಮಾರನಹಳ್ಳಿಯ ಪೆಟ್ರೋಲ್ ಬಂಕ್ ಮುಂಭಾಗ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಶಾಸಕ ಎಸ್. ರಾಮಪ್ಪ ಮಾತನಾಡಿ, ಕಳೆದ 7 ವರ್ಷಗಳಿಂದಲೂ ಸುಳ್ಳು ಹೇಳಿಕೊಂಡೇ ಅಧಿಕಾರ ನಡೆಸುತ್ತಿರುವ ನರೇಂದ್ರ ಮೋದಿ ಅವರ ನಿಜ ಬಣ್ಣ ಜನತೆಗೆ ಗೊತ್ತಾಗಿದೆ. ಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಜನರಿಂದ ತಿರಸ್ಕೃತವಾಗುವುದು ಸೂರ್ಯನಷ್ಟೇ ಸತ್ಯ ಎಂದರು.



ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿ ಸಾಮಾನ್ಯ ಜನರ ಜೀವನದ ಜೊತೆ ಚೆಲ್ಲಾಟವಾಡುತ್ತಿರುವ ಕೇಂದ್ರ ಸರ್ಕಾರ, ಭತ್ತ ಖರೀದಿ ಕೇಂದ್ರ ತೆರೆಯುವಲ್ಲಿ ಸಂಪೂರ್ಣ ವಿಫಲವಾಗಿದೆ ಎಂದು ರಾಮಪ್ಪ ದೂರಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ, ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಕುಂಬಳೂರು ವಾಸುದೇವ ಮೂರ್ತಿ, ಗ್ರಾ.ಪಂ. ಸದಸ್ಯರಾದ ಎಂ.ಆರ್. ಬಸವರಾಜ್, ಚಿಕ್ಕಣ್ಣ, ಚಂದ್ರಪ್ಪ, ನೀಲಪ್ಪ, ಎಸ್.ಎಂ. ಮಂಜುನಾಥ್, ಅಣ್ಣೇಶ್, ನವೀನ್ ಪಟೇಲ್, ಪರಮೇಶ್ವರನಾಯ್ಕ್, ಹೋಟೆಲ್ ಪರಮೇಶ್ವರಪ್ಪ, ಪೂಜಾರ್ ರಾಜಪ್ಪ ಇನ್ನಿತರರು ಭಾಗವಹಿಸಿದ್ದರು.

# ಕಾಂಗ್ರೆಸ್ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಇಂಧನ ತೆರಿಗೆ ಇಳಿಸಲಿ

## ಜಗಳೂರು ಶಾಸಕ ಎಸ್.ವಿ. ರಾಮಚಂದ್ರಪ್ಪ ಒತ್ತಾಯ



ಹರಪನಹಳ್ಳಿ, ಜೂ.16- ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ವಿಚಾರದಲ್ಲಿ ಪ್ರತಿಭಟನೆ ಮಾಡುತ್ತಿರುವ ಕಾಂಗ್ರೆಸ್‌ಗೆ ನಿಜವಾದ ಕಾಳಜಿ ಇದ್ದಲ್ಲಿ ತಮ್ಮ ಪಕ್ಷ ಅಧಿಕಾರದಲ್ಲಿರುವ ರಾಜ್ಯಗ ಳಲ್ಲಿ ಮೊದಲು ಇಂಧನದ ಮೇಲಿನ ತೆರಿಗೆ ಇಳಿಸಲಿ ಎಂದು ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷ, ಶಾಸಕ ಎಸ್.ವಿ. ರಾಮಚಂದ್ರಪ್ಪ ಹೇಳಿದರು.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿ, ಇಂಧನ ಬೆಲೆ ಹೆಚ್ಚಳದಲ್ಲಿ ಕೇಂದ್ರದ ಶುಲ್ಕ 23 ರೂಪಾಯಿ. ಅದರಲ್ಲಿ 13 ರೂ. ಮಾತ್ರ ಕೇಂದ್ರಕ್ಕೆ ಹೋಗುತ್ತದೆ. ಉಳಿದ 9.70 ರೂ. ರಾಜ್ಯಕ್ಕೆ ವರ್ಗಾವಣೆ ಆಗುತ್ತದೆ. ರಾಜ್ಯ ವ್ಯಾಟ್ ಮೂಲಕ ಶೇ.20 ರಿಂದ 26 ರಷ್ಟು ತೆರಿಗೆಯನ್ನು ಹಾಕುತ್ತಿದೆ. ಕಾಂಗ್ರೆಸ್ಸಿಗರಿಗೆ ಪೆಟ್ರೋಲ್, ಡಿಸೇಲ್ ಬೆಲೆ ಏರಿಕೆ ವಿಚಾರದಲ್ಲಿ ಕಳಕಳಿ ಇದ್ದಲ್ಲಿ ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳು ಅಧಿಕಾರ ದಲ್ಲಿರುವ ರಾಜಸ್ಥಾನ, ಪಂಜಾಬ್, ತಮಿಳುನಾಡು, ಮಹಾರಾಷ್ಟ್ರ, ಛತ್ತೀಸ್ ಘಡ, ಜಾರ್ಖಂಡ್, ರಾಜ್ಯಗಳಲ್ಲಿ ಪೆಟ್ರೋಲ್, ಡೀಸೆಲ್ ಮೇಲಿನ ರಾಜ್ಯದ ವ್ಯಾಟ್ ತೆರಿಗೆಯನ್ನು ಇಳಿಸಲಿ. ಆಗ ಇತರರನ್ನು ಪ್ರಶ್ನಿಸಲು ನೈತಿಕ ಅಧಿಕಾರ ಇರುತ್ತದೆ ಎಂದರು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಶೇ.46 ರಷ್ಟು ಕಚ್ಚಾ ತೈಲದ ಬೆಲೆ ಏರಿಕೆಯಾದ ಹಿನ್ನೆಲೆ ಭಾರತದಲ್ಲೂ ಇಂಧನ ಬೆಲೆ ಹೆಚ್ಚಾಗಿದೆ. ಶೇ. 85ರಷ್ಟು ವಿದೇಶದಿಂದ ಆಮದು ಮಾಡಿಕೊಂಡು ತೈಲ ಬಳಸಬೇಕಿದೆ. ಇಂಧನ ವಿಚಾರದಲ್ಲಿ ಸ್ವಾತಂತ್ರ್ಯ ಬಂದಾಗಿನಿಂದಲೇ ಸ್ವಾವಲಂಬನೆ ಕಡೆಗೆ ಹೆಜ್ಜೆ ಹಾಕಿದ್ದರೆ ಪರ್ಯಾಯವನ್ನು ಕಂಡುಕೊಳ್ಳಬಹುದಿತ್ತು. ಈಗ ಇಥೆನಾಲ್ ಬಳಕೆ ಹೆಚ್ಚಿಸಲು ಪ್ರಧಾನಿ ನರೇಂದ್ರ ಮೋದಿಜಿಯವರು ಗಮನ ಕೊಟ್ಟಿದ್ದಾರೆ.

ಮುಂದಿನ ದಿನಗಳಲ್ಲಿ ಪೆಟ್ರೋಲ್, ಡೀಸೆಲ್ ವಾಹನ ಬದಲಿಗೆ ಬ್ಯಾಟರಿ ಚಾಲಿತ ಎಲೆಕ್ಟ್ರಿಕ್ ವಾಹನ ಬಳಿಕೆ ಹೆಚ್ಚಾಗಲಿದೆ. ಇದಕ್ಕೆ ಕೇಂದ್ರ ಸರ್ಕಾರ ವ್ಯವಸ್ಥಿತ ಯೋಜನೆ ರೂಪಿಸುತ್ತಿದೆ ಎಂದ ಅವರು, ಬಿಜೆಪಿ ಸರ್ಕಾರದ ಆಯುಷ್ಮಾನ್ ಯೋಜನೆ, ಗರೀಬಿ ಕಲ್ಯಾಣ, ಕಿಸಾನ್ ಸಮ್ಮಾನ್, ಕನಿಷ್ಟ ಬೆಂಬಲ ಬೆಲೆ, ಉಚಿತ ಶೌಚಾಲಯ ಕಟ್ಟಿ ಕೊಡುವ ಯೋಜನೆಗಳು ಜನರಿಗೆ ನೆರವಾಗುವ ಕೆಲಸ ಮಾಡುತ್ತಿವೆ ಎಂದರು.

# ಲಸಿಕೆ ತಂದು ಫೋಟೋ ಹಾಕಿಕೊಳ್ಳಲಿ: ಎಸ್ಸೆಸ್

**(1ನೇ ಪುಟದಿಂದ)** ಮರು ಪ್ರಶ್ನೆ ಎಸೆದರು.


ಮುಖ್ಯಮಂತ್ರಿ ಯಡಿಯೂರಪ್ಪನವರನ್ನು ಬದಲಾಯಿಸಲು ನಡೆಯುತ್ತಿರುವ ಬೆಳವಣಿಗೆಯನ್ನು ಪ್ರಸ್ತಾಪಿಸಿದಾಗ, ಎಲ್ಲರೂ ಸೇರಿಕೊಂಡು ಮುಖ್ಯಮಂತ್ರಿ ಬದಲಾವಣೆ ಮಾಡಿಕೊಳ್ಳಲಿ. ಅದಕ್ಕೆ ನಾವೇನು ಹೇಳೋಣ ಎಂದು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು. ನಾವು ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಜನರಿಗೆ ಲಸಿಕೆ ಹಾಕಿಸುತ್ತಿಲ್ಲ. ಕೊರೊನಾದಿಂದ ಸಾವಿನ ಪ್ರಮಾಣ ತಡೆಯಬೇಕೆಂಬ ಸದುದ್ದೇಶದಿಂದ ಮಾತ್ರ ಲಸಿಕೆ ಕೊಡಿಸುತ್ತಿದ್ದೇವೆಯೇ ಹೊರತು, ಇದರ ಹಿಂದೆ ಚುನಾವಣೆ ಗೆಲ್ಲುವ ದುರುದ್ದೇಶ ಇಲ್ಲ ಎಂದು ಸ್ಪಷ್ಟಪಡಿಸಿದರು.

ಹಿತ, ಮಿತ ಆಹಾರ ಸೇವಿಸಿದರೆ ಆರೋಗ್ಯಯುತವಾಗಿ ಬದುಕಬಹುದು. ಇದೇ ತಮ್ಮ ಆರೋಗ್ಯದ ಗುಟ್ಟು ಎಂದು ಸುದ್ದಿಗಾರರ ಮತ್ತೊಂದು ಪ್ರಶ್ನೆಗೆ ಉತ್ತರಿಸಿದರು.

ಕಾರ್ಯಕ್ರಮದ ವೇಳೆ ನಗರ ಪಾಲಿಕೆಯ 38ನೇ ವಾರ್ಡಿನ ಸದಸ್ಯ ಗಡಿಗುಡಾಳ್ ಮಂಜುನಾಥ್ ಅವರ ನೇತೃತ್ವದಲ್ಲಿ ಎಸ್ಸೆಸ್ ಅವರ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಕಾಂಗ್ರೆಸ್ ಸದಸ್ಯರು ಕೊಡಮಾಡಲ್ಪಟ್ಟ ದಿನಸಿ ಕಿಟ್ ಗಳನ್ನು ಪತ್ರಕರ್ತರಿಗೆ ವಿತರಿಸಲಾಯಿತು.

ನಗರ ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್, ಸದಸ್ಯರುಗಳಾದ ಚಮನ್ ಸಾಬ್, ಅಬ್ದುಲ್ ಲತೀಫ್, ವಿನಾಯಕ ಪೈಲ್ವಾನ್, ಕೆಪಿಸಿಸಿ ವಕ್ತಾರ ಡಿ. ಬಸವರಾಜ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ಮುಖಂಡರುಗಳಾದ ಗಣೇಶ್ ಹುಲ್ಲುಮನಿ, ಅಯೂಬ್ ಪೈಲ್ವಾನ್, ಶ್ರೀಕಾಂತ್ ಬಗರೆ, ವರದಿಗಾರರ ಕೂಟದ ಅಧ್ಯಕ್ಷ ಜಿಎಂಆರ್ ಆರಾಧ್ಯ, ಪ್ರಧಾನ ಕಾರ್ಯದರ್ಶಿ ಮಂಜುನಾಥ ಕಾಡಜ್ಜಿ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಹರಿಹರ ತಾಲ್ಲೂಕಿನಲ್ಲಿ ಸೋಂಕು ಇಳಿಕೆ




ಮಲೇಬೆನ್ನೂರು, ಜೂ.16- ಕಳೆದ 4-5 ದಿನಗಳಿಂದ ಹರಿಹರ ತಾಲ್ಲೂಕಿನಲ್ಲಿ ಕೊರೊನಾ ಪ್ರಕರಣಗಳು ಇಳಿಮುಖವಾಗಿದ್ದು, ಟೆಸ್ಟ್‌ಗಳನ್ನು ಹೆಚ್ಚಿಸಲಾಗಿದೆ.

ಶನಿವಾರ-15, ಭಾನುವಾರ-34, ಸೋಮವಾರ-12 ಮತ್ತು ಮಂಗಳವಾರ-15, ಬುಧವಾರ ಬೆಳಗಿನ ವರದಿ ಪ್ರಕಾರ 18 ಪಾಸಿಟಿವ್ ಕೇಸ್‌ಗಳು ಬಂದಿವೆ.

**613 ಟೆಸ್ಟ್:** ಮಂಗಳವಾರ ಹರಿಹರ ತಾಲ್ಲೂಕಿನಲ್ಲಿ 613 ಜನರಿಗೆ ಕೋವಿಡ್ ಟೆಸ್ಟ್ ಮಾಡಿದ್ದು, 146 ರ್ಯಾಪಿಡ್ ಟೆಸ್ಟ್‌ನಲ್ಲಿ ಐವರಿಗೆ ಮಾತ್ರ ಸೋಂಕು ದೃಢಪಟ್ಟಿದೆ.

ಕೆ. ಬೇವಿನಹಳ್ಳಿಯಲ್ಲಿ 84, ಕೊಕ್ಕನೂರಿನಲ್ಲಿ 78, ಹಾಲಿವಾಣದಲ್ಲಿ-121, ಭಾನುವಳ್ಳಿಯಲ್ಲಿ 180, ನಂದಿತಾವರೆಯಲ್ಲಿ 21, ಮಲೇಬೆನ್ನೂರಿನಲ್ಲಿ 24, ಹರಿಹರದಲ್ಲಿ 90 ಜನರು ಟೆಸ್ಟ್‌ಗೆ ಒಳಗಾಗಿದ್ದಾರೆ. ಯಲವಟ್ಟಿಯಲ್ಲಿ ನಿನ್ನೆ ಮತ್ತು ಇವತ್ತು ಸೇರಿ 87 ಜನರು ಸ್ವಯಂ ಪ್ರೇರಣೆಯಿಂದ ಕೊರೊನಾ ಪರೀಕ್ಷೆ ಮಾಡಿಸಿಕೊಂಡು ಗಮನ ಸೆಳೆದರು.

# ಜಲಾಮೃತ ಯೋಜನೆಯ ಕಾಮಗಾರಿಗಳ ಪರಿಶೋಧನೆ



**ಜಗಳೂರು ತಾಲ್ಲೂಕು**

ಜಗಳೂರು, ಜೂ.16- ಉಪ ಕೃಷಿ ನಿರ್ದೇಶಕ ಆರ್. ತಿಪ್ಪೇಸ್ವಾಮಿ ಅವರು ಇಂದು ತಾಲ್ಲೂಕಿನಲ್ಲಿ ಕೃಷಿ ಇಲಾಖೆಯಿಂದ ಹಮ್ಮಿಕೊಂಡಿರುವ ಎಂಎನ್‌ಆರ್‌ಇಜಿಎಸ್ ಜಲಾಮೃತ ಯೋಜನೆ ಕಾಮಗಾರಿಗಳ ಪರಿಶೀಲನೆ ನಡೆಸಿದರು.

ತಾಯಿಟೋಣಿ, ಸಿದ್ದಿಹಳ್ಳಿ ಮತ್ತು ಹಾಲೇಹಳ್ಳಿ ಗ್ರಾಮಗಳಿಗೆ ಭೇಟಿ ನೀಡಿ ಕಂದಕ ಬದುಗಳ ಕಾಮಗಾರಿಗಳು, ತಾಕುಗಳ ಕಾಮಗಾರಿಗಳನ್ನು ವೀಕ್ಷಿಸಿದರು.

ಸ್ಥಳದಲ್ಲಿ ಕೂಲಿಗಾರರ ಜಾಬ್ ಕಾರ್ಡ್ ಮತ್ತು ಎನ್.ಎಂ.ಆರ್ ಗಳನ್ನು ಪರಿಶೀಲನೆ ಮಾಡಿದರು. ಭೇಟಿ ಸಂದರ್ಭದಲ್ಲಿ ಕೂಲಿಗಾರರಿಗೆ ಮಾಸ್ಕ್‌ಗಳನ್ನು ವಿತರಿಸಿ, ಕೋವಿಡ್ ನಿಯಮಾವಳಿಗಳನ್ನು ತಪ್ಪದೇ ಪಾಲಿಸಬೇಕು ಮತ್ತು ಮಣ್ಣು ಮತ್ತು ನೀರು ಸಂರಕ್ಷಣೆ ಬಗ್ಗೆ ಉಪ ಕೃಷಿ ನಿರ್ದೇಶಕರು ಮಾಹಿತಿಯನ್ನು ನೀಡಿದರು.

2021-22 ನೇ ಸಾಲಿನಲ್ಲಿ ಎಂಎನ್‌ಆರ್‌ಇಜಿಎಸ್ ಅಡಿಯಲ್ಲಿ ಸಿದ್ದಿಹಳ್ಳಿಯಲ್ಲಿ 115, ಹಾಲೇಹಳ್ಳಿ 29 ಮತ್ತು ತಾಯಿಟೋಣಿಯಲ್ಲಿ 35 ಕೂಲಿಗಾರರು ಕೆಲಸ ಮಾಡುತಿದ್ದರು. ಇಲ್ಲಿಯವರೆಗೆ ಒಟ್ಟು 8,090 ಮಾನವ ದಿನಗಳು ಪ್ರಗತಿಯಾಗಿರುತ್ತದೆ ಎಂದು ಸಹಾಯಕ ಕೃಷಿ ನಿರ್ದೇಶಕ ಶ್ರೀನಿವಾಸ್ ತಿಳಿಸಿದರು.

ಈ ಸಂದರ್ಭದಲ್ಲಿ ನರೇಗಾ ತಾಂತ್ರಿಕ ಸಂಯೋಜಕ ಹರ್ಷ ಮತ್ತು ಕೃಷಿ ಅಧಿಕಾರಿ ಹರ್ಷ ಇದ್ದರು.

# 207 ಪಾಸಿಟಿವ್

**(1ನೇ ಪುಟದಿಂದ)** ಗ್ರಾಮದ 55 ವರ್ಷದ ಪುರುಷ, ದಾವಣಗೆರೆ ನಗರದ 62 ವರ್ಷದ ಪುರುಷ, 66 ವರ್ಷದ ಮಹಿಳೆ, ವಿನೋಬ ನಗರದ 79 ವರ್ಷದ ಪುರುಷ, ಚನ್ನಗಿರಿ ತಾಲ್ಲೂಕು ಹಳ್ಳಿಮಲ್ಲಾಪುರದ 24 ವರ್ಷದ ಮಹಿಳೆ, ಹರಿಹರ ದೊಡ್ಡ ಬಾತಿಯ 65 ವರ್ಷದ ಮಹಿಳೆ, ಹೊನ್ನಾಳಿ ತಾಲ್ಲೂಕು ಕೊನಾಯಕನ ಹಳ್ಳಿಯ 70ರ ಪುರುಷ ಕೋವಿಡ್ ಸೋಂಕಿನಿಂದ ಮೃತಪಟ್ಟಿದ್ದಾರೆ.

ಜಿಲ್ಲೆಯಲ್ಲಿ 2761 ಸಕ್ರಿಯ ಪ್ರಕರಣಗಳಿದ್ದು, ಇಲ್ಲಿಯವರೆಗೆ 155 ಜನರು ಮೃತಪಟ್ಟಿದ್ದಾರೆ.

**6 ಬ್ಲಾಕ್ ಫಂಗಸ್ ಪ್ರಕರಣ:** ಜಿಲ್ಲೆಯಲ್ಲಿಂದು 6 ಬ್ಲಾಕ್ ಫಂಗಸ್ ಪ್ರಕರಣಗಳು ವರದಿಯಾಗಿವೆ. ಸಿ.ಜಿ. ಆಸ್ಪತ್ರೆಯಲ್ಲಿ ಒಬ್ಬರು ಹಾಗೂ ಎಸ್.ಎಸ್.ಐ.ಎಂ.ಎಸ್. ಆಸ್ಪತ್ರೆಯಲ್ಲಿ ಐವರು ಚಿಕಿತ್ಸೆ ಪಡೆಯುತ್ತಿದ್ದಾರೆ.

# ಕೊರೊನಾ ಇಳಿಕೆ

**(1ನೇ ಪುಟದಿಂದ)** ಬಿಗಿ ಲಾಕ್‌ಡೌನ್ ಘೋಷಣೆ, ಸೋಂಕು ಹೆಚ್ಚಾಗಿರುವ ಗ್ರಾಮೀಣ ಪ್ರದೇಶಗಳನ್ನು ನಿಯಂತ್ರಿತ ವಲಯ ಎಂದು ಘೋಷಿಸಿ ಬಿಗಿ ಕ್ರಮ ತೆಗೆದುಕೊಂಡಿರುವುದು ಹಾಗೂ ಲಸಿಕಾಕರಣದ ಹಿನ್ನೆಲೆಯಲ್ಲಿ ಇದೀಗ ಸೋಂಕಿತರ ಸಂಖ್ಯೆ ದಿನ ಕಳೆದಂತೆ ಇಳಿಕೆಯಾಗುತ್ತಿದೆ. ಸೋಂಕು ಇಳಿಕೆಯಾಗಿ, ಲಾಕ್‌ಡೌನ್ ತೆರವಾಗುವುದನ್ನೇ ಕಾಯುತ್ತಿದ್ದ ಬಡ ಹಾಗೂ ಮಧ್ಯಮ ವರ್ಗದ ಜನರು, ವ್ಯಾಪಾರಿಗಳು ತುಸು ನಿಟ್ಟುಸಿರು ಬಿಡುವಂತಾಗಿದೆಯಾದರೂ, ಇನ್ನೂ ಕೆಲವು ದಿನಗಳು ಏನೂ ಹೇಳಲಾಗದು.


# ಶ್ರೀಮತಿ ನಿಂಗಮ್ಮ ನಿಧನ



ದಾವಣಗೆರೆ ವಾಸಿ ಲಿಂ॥ ಮಹಾಂತಪ್ಪ ಭದ್ರಣ್ಣನವರ ಧರ್ಮಪತ್ನಿ **ಶ್ರೀಮತಿ ನಿಂಗಮ್ಮ** ಅವರು ದಿನಾಂಕ 16.06.2021ರ ಬುಧವಾರ ಸಂಜೆ 7 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 84 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 17.06.2021ರ ಗುರುವಾರ ಬೆಳಿಗ್ಗೆ ಗಾಂಧಿನಗರದ ರುದ್ರಭೂಮಿಯಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ
ಎಂ. ವೀರೇಶ್ (ಮಹಾನಗರ ಪಾಲಿಕೆ ನೌಕರರು, ದಾವಣಗೆರೆ.) ರಾಜು
ಮೊಬೈಲ್ : 94483 09910, 98444 83409


# ನೇರ ತೆರಿಗೆ ಸಂಗ್ರಹ ದುಪ್ಪಟ್ಟು ಹೆಚ್ಚಳ

**(1ನೇ ಪುಟದಿಂದ)** 74,356 ಕೋಟಿ ರೂ. ಹಾಗೂ ವೈಯಕ್ತಿಕ ತೆರಿಗೆ 1.11 ಲಕ್ಷ ಕೋಟಿ ರೂ. ಎಂದು ತಿಳಿಸಲಾಗಿದೆ.

ಕಳೆದ ವರ್ಷ ಇದೇ ಅವಧಿಯಲ್ಲಿ 92,762 ಕೋಟಿ ರೂ.ಗಳ ತೆರಿಗೆ ಸಂಗ್ರಹವಾಗಿತ್ತು.

ಈ ಬಾರಿ ತೆರಿಗೆ ಸಂಗ್ರಹ ಶೇ.100.4ರಷ್ಟು ಹೆಚ್ಚಾಗಿದೆ ಎಂದು ತಿಳಿಸಲಾಗಿದೆ.

# ಸಬ್ಸಿಡಿ ಹೆಚ್ಚಿಸಲು ಸಂಪುಟದ ಅಸ್ತು

**(1ನೇ ಪುಟದಿಂದ)** ತೆಗೆದುಕೊಳ್ಳಲಾದ ನಿರ್ಧಾರದ ಬಗ್ಗೆ ವಿವರ ನೀಡಿರುವ ರಸಗೊಬ್ಬರ ಖಾತೆ ಅಧೀನ ಸಚಿವ ಮನ್‌ಸುಖ್ ಮಾಂಡವೀಯ, ಡಿಎಪಿ ಗೊಬ್ಬರ ರೈತರಿಗೆ ಈ ಹಿಂದಿನ 1,200 ರೂ. ದರದಲ್ಲೇ ಲಭ್ಯವಾಗಲಿದೆ ಎಂದಿ ದ್ದಾರೆ. ಪ್ರತಿ ಚೀಲದಲ್ಲಿ 50 ಕೆಜಿ ರಸಗೊಬ್ಬರ ಇರುತ್ತದೆ.


॥ ಶ್ರೀ ಶ್ರೀಶೈಲ ಮಲ್ಲಿಕಾರ್ಜುನ ಪ್ರಸನ್ನ॥

# ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ




ಮಾಲತೇಶ ಉರೇಕೊಂಡಿ ಮತ್ತು
ನಿತ್ಯಪೂರ್ಣ ಮಾಲತೇಶ ಓ.
ದಾವಣಗೆರೆ ತಾಲ್ಲೂಕು, ಜಿಲ್ಲೆ
ಇವರು ಮಾಡುವ ವಿಜ್ಞಾಪನೆಗಳು

ದಿನಾಂಕ : 13.06.2021ನೇ ಭಾನುವಾರ ಮಧ್ಯಾಹ್ನ 1.30ಕ್ಕೆ ನಮ್ಮ ಪೂಜ್ಯ ತಾಯಿಯವರಾದ

ಶ್ರೀಮತಿ ಲತಾ ಸೋಮನಾಥ್ ಉರೇಕೊಂಡಿಯವರು
ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಶಿವಗಣಾರಾಧನೆ'ಯನ್ನು
ದಿನಾಂಕ : 17.06.2021ನೇ ಗುರುವಾರ ಬೆಳಗ್ಗೆ 11 ಗಂಟೆಗೆ ದಾವಣಗೆರೆ ಮಂಡಿಪೇಟೆಯ ನಮ್ಮ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : ಸಹನ ಓ.ಎಸ್, ಚಂದನಾ ಸಿದ್ದಲಿಂಗಸ್ವಾಮಿ, ಮೊಮ್ಮಕ್ಕಳು ಹಾಗೂ ಉರೇಕೊಂಡಿ ಕುಟುಂಬದವರು ಫೋ. : 88671 59286




# ಬಾಡದ ಶಂಕರಪ್ಪ ನಿಧನ



ದಾವಣಗೆರೆ ಎಂಸಿಸಿ 'ಎ' ಬ್ಲಾಕ್ ಬಕ್ಕೇಶ್ವರ ಹೈಸ್ಕೂಲ್ ಹಿಂಭಾಗದ ವಾಸಿ ನಿವೃತ್ತ ಶಿರಸ್ತೇದಾರ (ನ್ಯಾಯಾಂಗ ಇಲಾಖೆ) ರಾದ ಕೆ. ಶಂಕರಪ್ಪ (87) ಅವರು, ದಿನಾಂಕ 16.06.2021 ನೇ ಬುಧವಾರ ರಾತ್ರಿ 11 ಗಂಟೆಗೆ ನಿಧನರಾದರು. ಮೂವರು ಪುತ್ರರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 17.06.2021 ನೇ ಗುರುವಾರ ಮಧ್ಯಾಹ್ನ 12 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನಡೆಯುವುದು.


# ಪತ್ರಕರ್ತ ಜಿ.ಎಂ.ಆರ್. ಆರಾಧ್ಯ ಅವರಿಗೆ ಮಾತೃ ವಿಯೋಗ



ದಾವಣಗೆರೆ, ಜೂ.16- 'ಜನಮಿಡಿತ' ಸಂಪಾದಕರೂ ಆದ ವರದಿಗಾರರ ಕೂಟದ ಅಧ್ಯಕ್ಷ ಜಿ.ಎಂ.ಆರ್.ಆರಾಧ್ಯ ಅವರ ಮಾತೃಶ್ರೀ ಶ್ರೀಮತಿ ಸರ್ವಮಂಗಳಮ್ಮ ಅವರು ಇಂದು ಸಂಜೆ ಚಿಕ್ಕಮಗಳೂರು ಜಿಲ್ಲೆ ಕಡೂರಿನಲ್ಲಿ ನಿಧನರಾದರು. ಸರ್ವಮಂಗಳಮ್ಮ, ಕಡೂರು ತಾಲ್ಲೂಕಿನ ಗಿರಿಯಾಪುರದ ದಿ॥ ಜಿ.ಎಂ.ಮರುಳಯ್ಯ ಅವರ ಧರ್ಮಪತ್ನಿ. ಮೃತರಿಗೆ ಸುಮಾರು 70 ವರ್ಷ ವಯಸ್ಸಾಗಿತ್ತು.

ಮೃತರು ಇಬ್ಬರು ಪುತ್ರರಾದ ಜಿ.ಎಂ.ಆರ್. ಆರಾಧ್ಯ ಮತ್ತು ಪ್ರೌಢಶಾಲಾ ಶಿಕ್ಷಕ ಜಿ.ಎಂ.ಯತೀಶ್, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ನಾಳೆ ದಿನಾಂಕ 17ರ ಗುರುವಾರ ಕಡೂರಿನಲ್ಲಿ ನಡೆಯಲಿದೆ.

# ಆದೇಶ ವಾಪಸ್

**(1ನೇ ಪುಟದಿಂದ)** ಕೇಂದ್ರಕ್ಕೆ ಇಂತಿಷ್ಟು ಎಂದು ಅನುದಾನ ನೀಡುತ್ತಿತ್ತು, ಇದರಿಂದ ನೊಂದ ಮಹಿಳೆಯರ ಪರ ಯಾರು ನಿಂತುಕೊಳ್ಳದಿದ್ದರೂ, ಮಹಿಳಾ ಮತ್ತು ಮಕ್ಕಳು ಕಲ್ಯಾಣ ಇಲಾಖೆಯ ನಿರ್ದೇಶನದಡಿ ಸಾಂತ್ವನ ಕೇಂದ್ರಗಳು ನೊಂದವರ ಬಾಳಲ್ಲಿ ಬೆಳಕು ಮೂಡಿಸಲು ಯತ್ನಿಸುತ್ತಿದ್ದವು.

ಆದರೆ ಈಗ ರಾಜ್ಯದ 194 ಸಾಂತ್ವನ ಕೇಂದ್ರಗಳ ಪೈಕಿ 71 ಕೇಂದ್ರಗಳನ್ನು ಏಪ್ರಿಲ್ 1ರಿಂದಲೇ ಬಂದ್ ಮಾಡಿದೆ ಎಂದು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ ರಾಜ್ಯ ಮಹಿಳಾ ಸಾಂತ್ವನ ಕೇಂದ್ರಗಳ ಒಕ್ಕೂಟದ ಅಧ್ಯಕ್ಷೆ ಡಾ. ಎಂ.ವಿಜಯಾ ಹಾಗೂ ಕಾರ್ಯದರ್ಶಿ ಎಂ. ಭೀಮಯ್ಯ ತಿಳಿಸಿದ್ದರು.

# ಬಿ.ಎಸ್.ಚನ್ನಬಸಪ್ಪ ಅಂಡ್ ಸನ್ಸ್ ಸಂಸ್ಥೆಯ ಸಿಬ್ಬಂದಿಗಳಿಗೆ ಉಚಿತ ಕೋವಿಡ್ ಲಸಿಕೆ



ದಾವಣಗೆರೆ, ಜೂ.16- ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ನೀಡಿರುವ ಕೋವಿಡ್ ಉಚಿತ ಲಸಿಕೆ ಶಿಬಿರವನ್ನು ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್ ನ ಸಿಬ್ಬಂದಿ ವರ್ಗ ಮತ್ತು ಅವರ ಕುಟುಂಬ ವರ್ಗದವರಿಗೆ ಡಿ. ದೇವರಾಜ ಅರಸು ಬಡಾವಣೆ ಬಿ ಬ್ಲಾಕ್ ನಲ್ಲಿರುವ ಶಿವ ಪಾರ್ವತಿ ಕಲ್ಯಾಣ ಮಂಟಪದಲ್ಲಿ ಇಂದು ನಡೆಸಲಾಯಿತು.

ಹರಿಹರದ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಸ್ವತಃ 2ನೇ ಡೋಸ್ ಲಸಿಕೆಯನ್ನು ಪಡೆಯುವುದರ ಮೂಲಕ ಶಿಬಿರವನ್ನು ಉದ್ಘಾಟಿಸಿದರು.

ಇದೇ ಸಂದರ್ಭದಲ್ಲಿ ಡಾ. ಶಾಮನೂರು ಶಿವಶಂಕರಪ್ಪ ಅವರ 90ನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಜವಳಿ ಉದ್ಯಮಿ ಬಿ.ಸಿ. ಉಮಾಪತಿ ಅವರ ನೇತೃತ್ವದಲ್ಲಿ ಶಿಬಿರ ಏರ್ಪಾಡಾಗಿತ್ತು.

ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿಜಯ ಮಹಾಂತೇಶ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ, ಚಂದ್ರಶೇಖರ ಪೂಜಾರ್, ಬಿಎಸ್ ಸಿಯ ಬಿ.ಸಿ. ಶಿವಕುಮಾರ್, ಬಿ.ಯು.ಚಂದ್ರಶೇಖರ್, ಶೇಖರ್, ವಿವೇಕ್ ಮತ್ತಿತರರು ಉಪಸ್ಥಿತರಿದ್ದರು.

# ಬಿಐಇಟಿ ಕಾಲೇಜಿನಲ್ಲಿ ನೇಮಕಾತಿ

ದಾವಣಗೆರೆ, ಜೂ.16 - ನಗರದ ಬಿಐಇಟಿ ಕಾಲೇಜಿನಲ್ಲಿ ಏಪ್ರಿಲ್ ಮತ್ತು ಮೇ 2021 ರ ಅವಧಿಯಲ್ಲಿ ಅನೇಕ ಪ್ರತಿಷ್ಠಿತ ಕೋರ್ ಮತ್ತು ಸಾಫ್ಟ್‌ವೇರ್ ಕಂಪನಿಗಳು ನೇಮಕಾತಿಗಾಗಿ ಭೇಟಿ ನೀಡಿದ್ದವು. ಇನ್ಫೋಸಿಸ್, ಗೀಗಸ್ಕೈ, ಅಕ್ಸೆಂಚರ್, ಫೇಸ್ ಅಕಾಡೆಮಿ, ಪೆಂಟಗನ್ ಸ್ಪೇಸ್, ಟೆಕಾನ್ವರ್ಟ್, ಕ್ಯೂ ಸ್ಪೈಡರ್, ಸಿನಿಫ್, ಯುನಿಸರ್ ಹೆಲ್ತ್ ಕೇರ್ ಇತ್ಯಾದಿ ಕಂಪನಿಗಳು ಕೆಲಸಕ್ಕಾಗಿ ವರ್ಚುವಲ್ ಡ್ರೈವ್ ನಡೆಸಿದ್ದರು.

ಕಂಪ್ಯೂಟರ್ ವಿಜ್ಞಾನ, ಮಾಹಿತಿ ವಿಜ್ಞಾನ, ಎಲೆಕ್ಟ್ರಾನಿಕ್ಸ್, ಎಲೆಕ್ಟ್ರಿಕಲ್, ಮೆಕ್ಯಾನಿಕಲ್, ಇನ್‌ಸ್ಟ್ರುಮೆಂಟೇಶನ್, ಟೆಕ್ಸ್‌ಟೈಲ್ ಮತ್ತು ಬಯೋಟೆಕ್ನಾಲಜಿ ಶಾಖೆಗಳಿಗೆ ಡ್ರೈವ್ ನಡೆಸಲಾಯಿತು.

ಈ ಡ್ರೈವ್‌ನಲ್ಲಿ ಮೇಲಿನ ಎಲ್ಲಾ ಶಾಖೆಗಳಿಂದ 86 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ ಎಂದು ಡೀನ್-ಟ್ರೈನಿಂಗ್ ಮತ್ತು ಪ್ಲೇಸ್‌ಮೆಂಟ್ ಸೆಲ್‌ನ ಡಾ.ಎಂ.ಎಸ್.ನಾಗರಾಜ್ ಮಾಹಿತಿ ನೀಡಿದರು.

ಈ ನೇಮಕಾತಿಯಲ್ಲಿ ಆಯ್ಕೆಯಾದ ಎಲ್ಲ ವಿದ್ಯಾರ್ಥಿಗಳನ್ನು ಬಾಪೂಜಿ ಅಸೋಸಿಯೇಷನ್‌ನ ಗೌರವ ಕಾರ್ಯದರ್ಶಿ ಶಾಮನೂರು ಶಿವಶಂಕರಪ್ಪ ಮತ್ತು ಎಸ್. ಎಸ್. ಮಲ್ಲಿಕಾರ್ಜುನ್, ಬಿಐಇಟಿ ನಿರ್ದೇಶಕ ವೈ. ವೃಷಭೇಂದ್ರಪ್ಪ ಮತ್ತು ಪ್ರಾಂಶುಪಾಲ ಡಾ.ಎಚ್. ಬಿ. ಅರವಿಂದ್ ಅಭಿನಂದಿಸಿದರು.

# ಗ್ರಾಮ ಪಂಚಾಯತಿಗಳ ಮುಂದೆ ಗ್ರಾ.ಪಂ. ನೌಕರರ ಪ್ರತಿಭಟನೆ



ದಾವಣಗೆರೆ, ಜೂ. 16- 15ನೇ ಹಣಕಾಸು, ನರೇಗಾ, ಗ್ರಾಮ ಪಂಚಾಯತಿ ಸ್ವಂತ ಸಂಪನ್ಮೂಲದಿಂದ ಸರ್ಕಾರಿ ಆದೇಶದಂತೆ ಗ್ರಾಮ ಪಂಚಾಯತಿ ಸಿಬ್ಬಂದಿಗೆ ವೇತನ ನೀಡಲು ಒತ್ತಾಯಿಸಿ ಸಿಐಟಿಯು ಸಂಯೋಜಿತ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ನೌಕರರ ಸಂಘದ ಪ್ರತಿಭಟನೆಯ ಕರೆ ಮೇರೆಗೆ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತಿಗಳ ಮುಂದೆ ಹಲವಾರು ಬೇಡಿಕೆಗಳ ಭಿತ್ತಿ ಪತ್ರಗಳನ್ನು ಹಿಡಿದು ಗ್ರಾಮ ಪಂಚಾಯತಿ ನೌಕರರು ಪ್ರತಿಭಟನೆ ನಡೆಸಿದರು. ನಂತರ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಸರ್ಕಾರದ ಆದೇಶದಂತೆ ಗ್ರಾಮ ಪಂಚಾಯತಿ ಸಿಬ್ಬಂದಿಗಳಿಗೆ ವೇತನ ಪಾವತಿಸುವಂತೆ ಜಿಲ್ಲಾಧ್ಯಕ್ಷ ಉಮೇಶ್ ಕೈದಾಳೆ ಆಗ್ರಹಿಸಿದ್ದಾರೆ.

# ಕೊರೊನಾದಲ್ಲಿ ಹೆಚ್ಚಾದ ಸೈಬರ್ ವಸೂಲಿ

**(1ನೇ ಪುಟದಿಂದ)** ಇಂಟರ್‌ನೆಟ್ ಬೇಕೆಂಬ ವಾದ ಮುಂದಿಡಲಾಗುತ್ತಿದೆ. ಈಗ ಬಳಸಲಾಗುತ್ತಿರುವ ಇಂಟರ್‌ನೆಟ್ ಮೂಲ 1960ರದ್ದಾಗಿದೆ. ಆಗ ಅಮೆರಿಕದಲ್ಲಿ ಸೈನಿಕ, ರಾಜಕೀಯ ಹಾಗೂ ಕೈಗಾರಿಕಾ ವಲಯದವರನ್ನು ಸಂಪರ್ಕಿಸಲು ಅರ್ಪಾನೆಟ್ ಎಂಬ ವ್ಯವಸ್ಥೆ ಬಳಸಲಾಗುತ್ತಿತ್ತು. ಇದು ಬಿಗಿ ನಿಯಂತ್ರಣದಿಂದ ಕೂಡಿತ್ತು.

ನಂತರ 1990ರಲ್ಲಿ ಟಿಮ್ ಬೆರ್ನರ್ಸ್ - ಲೀ ಅವರು ವರ್ಡ್ ವೈಡ್ ವೆಬ್ (ಡಬ್ಲ್ಯೂ.ಡಬ್ಲ್ಯೂ.ಡಬ್ಲ್ಯೂ.) ಎಂಬ ಬ್ರೌಸರ್ ಆಧರಿತ ಇಂಟರ್‌ನೆಟ್ ಪರಿಚಯಿಸಿದ್ದರು. ಅದೇ ಈಗ ಜಗತ್ತೆಲ್ಲ ಬಳಸುತ್ತಿರುವ ಇಂಟರ್‌ನೆಟ್ ಆಗಿದೆ.

ಸೈಬರ್ ಅಪರಾಧದ ದೊಡ್ಡ ಭಾಗ ರ್‍ಯಾನ್‌ಸಮ್‌ವೇರ್ ಆಗಿದೆ. ಸುಯೋಜಿತವಾಗಿ ದಾಳಿ ಮಾಡಿ ಸಂಘಟನೆಗಳ ಮಾಹಿತಿ ಹಾಗೂ ವ್ಯವಸ್ಥೆಗಳನ್ನು ವಶಕ್ಕೆ ತೆಗೆದುಕೊಳ್ಳುವುದೇ ರ್‍ಯಾನ್‌ಸಮ್‌ವೇರ್. ಕೊರೊನಾ ನಂತರ ರ್‍ಯಾನ್‌ಸಮ್‌ವೇರ್ ದಾಳಿ ಪ್ರಮಾಣ ಐದು ಪಟ್ಟು ಹೆಚ್ಚಾಗಿದೆ. 2020ರ ಕೊನೆ ಚತುರ್ಥದ ನಂತರ ಪ್ರತಿ ರ್‍ಯಾನ್‌ಸಮ್‌ವೇರ್ ದಾಳಿಗೆ ನೀಡುವ ಹಣ ಶೇ.43ರಷ್ಟು ಹೆಚ್ಚಾಗಿದೆ. ಸರಾಸರಿ ಪಾವತಿ ಮೊತ್ತ 2 ಲಕ್ಷ ಡಾಲರ್ ಎಂದು ಹೇಳಲಾಗುತ್ತಿದೆ. 2021ರ ಮೊದಲ ಚತುರ್ಥದಲ್ಲಿ ಈ ದಾಳಿಗಳ ಪ್ರಮಾಣ ಇನ್ನಷ್ಟು ಹೆಚ್ಚಾಗುತ್ತಿದೆ.

ಕಳೆದ ಮಾರ್ಚ್‌ನಲ್ಲಿ ಸಿಎನ್‌ಎ ಫೈನಾನ್ಷಿಯಲ್ ಮೇಲೆ ರ್‍ಯಾನ್‌ಸಮ್‌ವೇರ್ ದಾಳಿ ನಡೆಸಲಾಗಿತ್ತು. ಆಗ ಕಂಪನಿ 40 ದಶಲಕ್ಷ ಡಾಲರ್‌ಗಳನ್ನು ಪಾವತಿಸಿತ್ತು. ಇದು ಅಧಿಕೃತವಾಗಿ ಪಾವತಿಸಲಾದ ಅತಿ ದೊಡ್ಡ ರ್‍ಯಾನ್‌ಸಮ್‌ವೇರ್ ಮೊತ್ತವಾಗಿದೆ.

ಇಂಟರ್‌ನೆಟ್‌ನಿಂದ ಸಮಸ್ಯೆ ಎದುರಾಗು ತ್ತಿರುವ ಹಿನ್ನೆಲೆಯಲ್ಲಿ ಇಂಟ್ರಾನೆಟ್ ಬಗ್ಗೆ ಒಲವು ಹೆಚ್ಚಾಗುತ್ತಿದೆ. ಇಂಟರ್‌ನೆಟ್ ಮುಕ್ತ ಜಾಲವಾಗಿದ್ದರೆ, ಇಂಟ್ರಾನೆಟ್ ಮುಚ್ಚಿದ ಜಾಲವಾಗಿದೆ. ಇದನ್ನು ಕೆಲವೇ ಜನರು ಸೀಮಿತವಾಗಿ ಬಳಸಬಹುದಾಗಿದೆ. ಇದರಲ್ಲಿನ ವೆಬ್ ತಾಣಗಳ ಮೇಲೆ ಬಿಗಿ ನಿಯಂತ್ರಣ ಇರುತ್ತದೆ.

ಅಮೆಜಾನ್ ರೀತಿಯ ಆನ್‌ಲೈನ್ ಮಾರಾ ಟಗಾರರು, ಸರ್ಕಾರಗಳು, ಆರೋಗ್ಯ ಸೇವಾದಾರರು ಹಾಗೂ ದೊಡ್ಡ ಸಂಘಟನೆಗಳು ಈಗ ಅಪರಾಧಿಕ ದಾಳಿಗೆ ಸೊಪ್ಪು ಹಾಕುವ ಸ್ಥಿತಿಯಲ್ಲಿ ಇಲ್ಲ. ಮುಕ್ತತೆಗಿಂತ ಸುರಕ್ಷತೆಯತ್ತ ಒಲವು ಹೆಚ್ಚಾಗುತ್ತಿದೆ.

# ರೈತರಿಗೆ ಮಣ್ಣು ಮಾದರಿ ಪರಿಚಯ



ದಾವಣಗೆರೆ, ಜೂ.16- ರೈತ ಸಂಪರ್ಕ ಕೇಂದ್ರ, ಕಸಬಾದಿಂದ ನಗರದಲ್ಲಿ ಮಣ್ಣು ಮಾದರಿ ತೆಗೆಯುವ ವಿಧಾನ ಹಾಗೂ ಜೀವಾಮೃತದ ಮಹತ್ವವನ್ನು ರೈತರಿಗೆ ತಿಳಿಸಲಾಯಿತು. ಹಿರಿಯ ಕೃಷಿ ಅಧಿಕಾರಿ ಟಿ.ಎನ್.ಲಾವಣ್ಯ, ಕೃಷಿ ಅಧಿಕಾರಿ ವಾಣಿ ಕುಮಾರ್ ಮಾತನಾಡಿ, ಮಣ್ಣು ಪರೀಕ್ಷೆಯ ಮಹತ್ವ ಹಾಗೂ ಜೀವಾಮೃತದಿಂದ ಮಣ್ಣಿನ ಆರೋಗ್ಯ ವೃದ್ಧಿಸಬಹುದು ಎಂದು ಮಾಹಿತಿ ನೀಡಿದರು. ಅಂತಿಮ ವರ್ಷದ ಬಿ.ಎಸ್ಸಿ ವಿದ್ಯಾರ್ಥಿ ಎ.ಎಂ.ಶಿವಕುಮಾರ್ ಅವರು ಮಣ್ಣಿನ ಜೀವಾಣು ಕ್ರಿಯೆಯನ್ನು ರೈತರಿಗೆ ವಿವರಿಸಿದರು.

# ರಾಣೇಬೆನ್ನೂರಿನಲ್ಲಿ ಬೈಕ್ ಕಳ್ಳನ ಬಂಧನ

ದಾವಣಗೆರೆ, ಜೂ.15- ಕಳೆದ 6-7 ತಿಂಗಳ ಹಿಂದೆ ನಗರದಲ್ಲಿ ಬೈಕ್ ಕಳ್ಳತನ ಮಾಡಿದ್ದ ಆರೋಪಿಯು ರಾಣೆಬೆನ್ನೂರಿನ ಶಹರ ಠಾಣೆಯ ಪೊಲೀಸರ ಕೈಗೆ ಸಿಕ್ಕಿ ಬಿದ್ದಿದ್ದು, ಬೈಕ್ ವಶಪಡಿಸಿಕೊಳ್ಳಲಾಗಿದೆ.

ನಿಟ್ಟುವಳ್ಳಿಯ ಷಣ್ಮುಖ ಮರುಳಸಿದ್ದಪ್ಪ ಬಂಧಿತ ಆರೋಪಿ. ಈತ 15, ಡಿ. 2020 ರಂದು ನಗರ ಪಾಲಿಕೆ ಆವರಣದಲ್ಲಿ ಹಾಡಹಗಲೇ ಕೆ.ಎ. 17 ಇಇ 2826 ನಂಬರ್‌ವುಳ್ಳ ಬೈಕ್ ಕಳವು ಮಾಡಿದ್ದ. ಈ ಸಂಬಂಧ ಬಡಾವಣೆ ಪೊಲೀಸ್ ಠಾಣೆಯಲ್ಲಿ ಶಹರ ಪೊಲೀಸ್ ಠಾಣೆಯ ಮುಖ್ಯ ಪೇದೆ ಕೆ.ಹೆಚ್. ಸಾಹೂರ್ ಪ್ರಕರಣ ದಾಖಲಿಸಿದ್ದಾರೆ.

# ಅನವಶ್ಯಕವಾಗಿ ಓಡಾಟ : ದಂಡ



**ಕೂಡ್ಲಿಗಿ**

ಕೂಡ್ಲಿಗಿ, ಜೂ.16- ತಾಲ್ಲೂಕಿನ ಕಾನಾಹೊಸಹಳ್ಳಿಯಲ್ಲಿ ಲಾಕ್‌ಡೌನ್ ಸಡಿಲಿಕೆಯಿಂದ ಮುಖಕ್ಕೆ ಮಾಸ್ಕ್ ಧರಿಸದೆ, ಅನಾವಶ್ಯಕವಾಗಿ ತಿರುಗಾಡುವ ವರಿಗೆ ಹಾಗೂ ವಾಹನ ಸವಾರರಿಗೆ ಎಎಸ್‌ಐ ಕೆ. ಗೋವಿಂದಪ್ಪ ಹಾಗೂ ಸಿಬ್ಬಂದಿಯವರು 100 ರೂಪಾಯಿ ದಂಡ ವಿಧಿಸಿದರು.

# ಸಿಂಗ್ ಚರ್ಚೆ

**(1ನೇ ಪುಟದಿಂದ)** ಸಂಬಂಧಿಸಿದಂತೆ ಇಂದೂ ಕೂಡಾ ಬಾಂಬ್ ಸಿಡಿಸಿದ್ದಾರೆ.


ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಕೆಲವರು ವರಿಷ್ಠರ ಮುಂದೆ ಬೇಡಿಕೆ ಇಟ್ಟಿರು ವುದು ನಿಜ ಎಂದು ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಡಿಯೂರಪ್ಪನವರೇ ಸಿಎಂ ಆಗಿ ಮುಂದುವರೆಯಲಿ ಎಂದು ಹೇಳುತ್ತಿದ್ದರೆ, ಇನ್ನು ಕೆಲವರು ಬದಲಾವಣೆಯಾಗಬೇಕು ಎನ್ನುತ್ತಿದ್ದಾರೆ.

ವರಿಷ್ಠರು ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧರಾಗಿತ್ತಾರೆ ಎಂದರು. ಮತ್ತೊಂದೆಡೆ ಶಾಸಕ ರೇಣುಕಾಚಾರ್ಯ ಮುಖ್ಯಮಂತ್ರಿಯವರ ಪರ 65 ಶಾಸಕರು ಸಹಿ ಹಾಕಿರುವ ಪತ್ರ ತಮ್ಮ ಬಳಿ ಇದೆ ಎಂದು ಪುನರುಚ್ಚ ರಿಸಿದ್ದಾರೆ. ಇದರ ಮಧ್ಯೆಯೇ ಅರುಣ್ ಸಿಂಗ್ ಸಚಿವರ ಜೊತೆ ಸಮಾಲೋಚನೆ ನಡೆಸಿದ್ದಾರೆ. ನಾಳೆ ಶಾಸಕರ ಜೊತೆ ಸಮಾಲೋಚನೆ ಮಾಡಲಿದ್ದಾರೆ. ಇನ್ನು 3 ದಿನ ಬಿಜೆಪಿಯ ಬಣಗಳಲ್ಲಿ ಯಾರು ಮೇಲುಗೈ ಸಾಧಿಸುತ್ತಾರೋ ಕಾದು ನೋಡಬೇಕು.









# 2.5 ಲಕ್ಷ ಸಾವಿನ ಸಂಖ್ಯೆ ಮುಚ್ಚಿಟ್ಟ ಸರ್ಕಾರ

**(1ನೇ ಪುಟದಿಂದ)** ಸಮಿತಿಗಳು ಕೆಲಸ ಮಾಡಲು ಅವಕಾಶ ನೀಡದಂತೆ ಸಭಾಧ್ಯಕ್ಷರು ತಡೆ ನೀಡಿದ್ದಾರೆ. ನಾವು ಒತ್ತಡ ಹಾಕಿದರೂ ಅದಕ್ಕೆ ಸ್ಪಂದನೆ ಸಿಕ್ಕಿಲ್ಲ. ನಾವು ಸಭೆ ನಡೆಸಿ ಸಲ್ಲಿಸಿದ ವರದಿಯನ್ನು ಶಾಸನ ಸಭೆಯಲ್ಲಿ ಮಂಡಿಸದೆ ಮುಚ್ಚಿಡಲಾಗುತ್ತಿದೆ. ಇದು ದುರಂತ. ಭ್ರಷ್ಟಾಚಾರ ವ್ಯಾಪಕವಾಗಿದೆ. ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ವರದಿಯನ್ನು ಬಹಿರಂಗ ಮಾಡಿ, ಸಮಿತಿ ಕೆಲಸ ಮಾಡಲು ಅವಕಾಶ ಮಾಡಿಕೊಡಿ ಎಂದು ಒತ್ತಾಯಿಸಿದರು.

ಸಂಪುಟ ಸಭೆ ನಡೆಯುತ್ತಿದೆ, ಪಕ್ಷ ಸಭೆಗಳು ನಡೆಯುತ್ತಿವೆ. ಸಾರ್ವಜನಿಕ ಲೆಕ್ಕ ಪತ್ರ ಸಮಿತಿ ಯಾಕೆ ಸಭೆ ನಡೆಸಬಾರದು. ಭ್ರಷ್ಟಚಾರ ಹೊರ ಬರುತ್ತದೆ ಎಂಬ ಕಾರಣಕ್ಕೆ ಕೆಲಸ ಮಾಡಲು ಅಡ್ಡಿಪಡಿಸಲಾಗುತ್ತಿದೆ ಎಂದು ಆರೋಪಿಸಿದರು. ರಾಜ್ಯದಲ್ಲಿ 1600 ವೆಂಟಿಲೇಟರ್‌ಗಳು ಈಗಲೂ ದಾಸ್ತಾನಿನಲ್ಲಿ ಕೊಳೆಯುತ್ತಾ ಬಿದ್ದಿವೆ. ಪಿಎಂ ಕೇರ್ಸ್‌ನಿಂದ ಕಳುಹಿಸಿದ ವೆಂಟಿಲೇಟರ್‌ಗಳನ್ನು ದಾಸ್ತಾನಿನಲ್ಲಿ ಇರುವುದು ಅನ್ಯಾಯದ ಪರಮಾವಧಿ ಎಂದರು.

# ವಾರದಲ್ಲಿ 48 ಜನ ಮೃತ

**(1ನೇ ಪುಟದಿಂದ)** ಆದರೆ ಮನೆಯಲ್ಲಿಯೇ ಚಿಕಿತ್ಸೆ ಪಡೆದು ಸೋಂಕು ಹೆಚ್ಚಾಗಿ ಉಸಿರಾಟದ ತೊಂದರೆ ತೀವ್ರವಾದಾಗ ಮಾತ್ರ ಆಸ್ಪತ್ರೆಗೆ ಬಂದು ದಾಖಲಾಗುತ್ತಿದ್ದಾರೆ. ಆಗ ವೈದ್ಯರು ಏನೂ ಮಾಡಲಾಗದ ಪರಿಸ್ಥಿತಿ ನಿರ್ಮಾಣವಾಗಿರುತ್ತದೆ ಎಂದರು.

ಕಳೆದ ಎರಡು ತಿಂಗಳಿಂದ ಜಿಲ್ಲಾಧಿಕಾರಿಗಳ, ಜಿ.ಪಂ. ಸಿಇಓ ಒಳಗೊಂಡ ಟಾಸ್ಕ್ ಫೋರ್ಸ್ ತಂಡ ಗ್ರಾಮೀಣ ಪ್ರದೇಶದಲ್ಲಿ ಸೋಂಕಿತರನ್ನು ಪತ್ತೆ ಹಚ್ಚುವ ಕಾರ್ಯ ಮಾಡುತ್ತಿದೆ. ಹೆಚ್ಚು ಹೆಚ್ಚು ಟೆಸ್ಟ್ ಮಾಡಲಾಗುತ್ತಿದೆ ಎಂದು ರಾಘವನ್ ಹೇಳಿದರು.


# ಔಷಧ ಮಕ್ಕಳಿಗಿಲ್ಲ


**(1ನೇ ಪುಟದಿಂದ)** ಪ್ರಯೋಗ ಮಾಡಿಲ್ಲ. ಹೀಗಾಗಿ ಇವುಗಳನ್ನು ಮಕ್ಕಳಿಗೆ ಶಿಫಾರಸ್ಸು ಮಾಡುವುದಿಲ್ಲ ಎಂದು ಹೇಳಿದೆ.


ಎರಡನೇ ಕೊರೊನಾ ಅಲೆ ಅತಿ ಹೆಚ್ಚಾಗಿದ್ದ ಸಂದರ್ಭದಲ್ಲಿ ಮಕ್ಕಳ ಆರೈಕೆಗೆ ಬೇಕಾದ ಬೆಡ್‌ಗಳ ಬೇಡಿಕೆ ಪರಿಗಣಿಸಿ ಕ್ರಮ ತೆಗೆದುಕೊಳ್ಳುವಂತೆ ತಿಳಿಸಲಾಗಿದೆ.







## ಎಸ್ಸೆಸ್ಸ್‌ಗೆ 90ನೇ ಹುಟ್ಟುಹಬ್ಬದ ಶುಭಾಶಯದ ಮಳೆ



ದಾವಣಗೆರೆ, ಜು. 16- ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರೂ ಆದ ಹಿರಿಯ ಶಾಸಕ ಡಾ|| ಶಾಮನೂರು ಶಿವಶಂಕರಪ್ಪ ಅವರ 90ನೇ ವರ್ಷದ ಹುಟ್ಟುಹಬ್ಬದ ಸಂದರ್ಭದಲ್ಲಿ ಅನೇಕ ಗಣ್ಯರು ಶುಭಾಶಯ ಸಲ್ಲಿಸಿದ್ದಾರೆ.

ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರ 'ಶಿವ ಪಾರ್ವತಿ' ನಿವಾಸಕ್ಕೆ ಆಗಮಿಸಿದ ಗಣ್ಯರು ಎಸ್ಸೆಸ್ ಅವರನ್ನು ಸನ್ಮಾನಿಸಿ, ಗೌರವಿಸುವುದರ ಮೂಲಕ ಶುಭ ಕೋರಿದರು.

ಎಸ್ಸೆಸ್ ಅವರ ಮಕ್ಕಳಾದ ಶ್ರೀಮತಿ ಮಂಜುಳಾ, ಶ್ರೀಮತಿ ಶೈಲಜಾ, ಶ್ರೀಮತಿ ಸುಧಾ, ಶ್ರೀಮತಿ ಮೀನಾ, ಎಸ್.ಎಸ್. ಬಕ್ಕೇಶ್, ಎಸ್.ಎಸ್. ಗಣೇಶ್, ಎಸ್.ಎಸ್.ಮಲ್ಲಿಕಾರ್ಜುನ್, ಡಾ|| ಎಸ್.ಬಿ.ಮುರುಗೇಶ್ ಸೇರಿದಂತೆ ಕುಟುಂಬದ ಎಲ್ಲಾ ಸದಸ್ಯರುಗಳು, ಬಂಧು-ಮಿತ್ರರು ಒಟ್ಟಾಗಿ ಸೇರಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಎಸ್ಸೆಸ್ ಕೇಕ್ ಕತ್ತರಿಸಿದರು.

ಎಸ್ಸೆಸ್ ಅವರ ಒಡನಾಡಿಗಳಲ್ಲೊಬ್ಬರಾದ ವಿಧಾನ ಪರಿಷತ್ ಸದಸ್ಯ ಕೆ.ಸಿ.ಕೊಂಡಯ್ಯ ಸೇರಿದಂತೆ ಅನೇಕ ರಾಜಕಾರಣಿಗಳು, ಒಡನಾಡಿಗಳು, ಸ್ನೇಹಿತರು, ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ವಿಜಯ ಮಹಾಂತೇಶ್ ದಾನಮ್ಮನವರ್, ಉಪವಿಭಾಗಾಧಿಕಾರಿ ಶ್ರೀಮತಿ ಮಮತಾ ಹೊಸಗೌಡರ್, ತಹಶೀಲ್ದಾರ್ ಗಿರೀಶ್, ಡೂಡಾ ಆಯುಕ್ತ ಬಿ.ಟಿ.ಕುಮಾರಸ್ವಾಮಿ, ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ಸೇರಿದಂತೆ ಅನೇಕ ಅಧಿಕಾರಿಗಳು, ಬಾಪೂಜಿ ವಿದ್ಯಾಸಂಸ್ಥೆಯ ಶಾಲಾ-ಕಾಲೇಜುಗಳ ಮುಖ್ಯಸ್ಥರು ಮತ್ತು ಸಿಬ್ಬಂದಿ ವರ್ಗದವರು 'ಶಿವ - ಪಾರ್ವತಿ' ನಿವಾಸಕ್ಕೆ ಆಗಮಿಸಿ ಶುಭಾಶಯ ತಿಳಿಸಿದರು.

## ಆಕಾಶವಾಣಿಯಲ್ಲಿ ಹೆಲ್ಪ್‌ಲೈನ್ ಸುಭಾನ್



ದಾವಣ ಗೆರೆ, ಜೂ.16- ನಗರದ ಸಮಾಜಿಕ ಸೇವಾ ಕಾರ್ಯಕರ್ತ ಹೆಲ್ಪ್‌ಲೈನ್ ಸುಭಾನ್ ಅವರು ನಾಡಿದ್ದು ದಿನಾಂಕ 18ರ ಶುಕ್ರ ವಾರ ಬೆಳಿಗ್ಗೆ 9 ಗಂಟೆಗೆ ಚಿತ್ರ ದುರ್ಗ ಆಕಾಶವಾಣಿ 102.6 ಮೆಘಾ ಹರ್ಟ್ಸ್ ನಲ್ಲಿ 'ಜೀವ ರಕ್ಷಣೆ' ಕುರಿತು ಮಾತನಾಡುವರು.

## ಬೆಳೆಗೆ ನೀರು ಬಿಡಲು ಮನವಿ



ದಾವಣಗೆರೆ, ಜೂ.16- ಭದ್ರಾ ಕ್ಯಾಚ್‌ಮೆಂಟ್ ಏರಿಯಾದಲ್ಲಿ ಕಳೆದ ವರ್ಷಕ್ಕಿಂತ ಈ ವರ್ಷ 85 ಇಂಚು ಮಳೆಯಾಗಿದೆ. ನೀರಿನ ಒಳಹರಿವು 11 ಸಾವಿರ ಕ್ಯೂಸೆಕ್ಸ್‌ಗಿಂತ ಹೆಚ್ಚು ಬರುತ್ತಿದೆ. ಈಗಾಗಲೇ 145 ಅಡಿ ತಲುಪಿದೆ. ತುರ್ತಾಗಿ ಕಾಡಾ ಸಭೆಯನ್ನು ಕರೆದು, ಜುಲೈ 1 ರಿಂದ ನೀರನ್ನು ಬಿಡಲು ತೀರ್ಮಾನಿಸಬೇಕೆಂದು ಕಾಡಾ ಅಧ್ಯಕ್ಷರಿಗೆ ಭಾರತೀಯ ರೈತ ಒಕ್ಕೂಟದ ಅಧ್ಯಕ್ಷ ಹೆಚ್. ಆರ್. ಲಿಂಗರಾಜ್ ಶಾಮನೂರು ಒತ್ತಾಯಿಸಿದ್ದಾರೆ.

ಈಗಾಗಲೇ ರೈತರು ಸಸಿಮಡಿ ತಯಾರಿ ಮಾಡಿಕೊಂಡಿದ್ದಾರೆ. ಈ ಕೂಡಲೇ ನೀರು ಬಿಡುವುದರಿಂದ ರನ್‌ದ ರಿವರ್‌ನಲ್ಲಿ ಮಳೆಗಾಲದ ಬೆಳೆ ಬೆಳೆದು ಅಣೆಕಟ್ಟೆಯಲ್ಲಿ 185 ಅಡಿ ಉಳಿದು ಬೇಸಿಗೆ ಬೆಳೆಗೆ ತೊಂದರೆಯಾಗುವುದಿಲ್ಲ ಎಂದು ಅವರು ತಿಳಿಸಿದ್ದಾರೆ.

## ಆನ್‌ಲೈನ್ ಯೋಗ ಶಿಬಿರ

ದಾವಣಗೆರೆ, ಜೂ.16- ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್, ಜಿಲ್ಲಾ ಆಯುಷ್ ಇಲಾಖೆ ಇವರ ಆಶ್ರಯದಲ್ಲಿ 7ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ 'ಯೋಗ ದೊಂದಿಗೆ ಇರಿ, ಮನೆಯಲ್ಲಿಯೇ ಇರಿ' ಕಾರ್ಯಕ್ರಮವು ಇದೇ ದಿನಾಂಕ 21 ರ ಸಂಜೆ 4 ರಿಂದ 5 ರವರೆಗೆ ಉಚಿತ ಆನ್‌ಲೈನ್ ಯೋಗ ಶಿಬಿರ ನಡೆಯಲಿದೆ.

## ಮಾಸ್ಕ್ ಧರಿಸದ 399 ಮಂದಿಗೆ ದಂಡ : 179 ವಾಹನಗಳ ವಶ

ದಾವಣಗೆರೆ, ಜೂ.16- ಮಾಸ್ಕ್ ಧರಿಸದೇ ಓಡಾಡುತ್ತಿದ್ದವರಿಗೆ ದಂಡದ ಬಿಸಿ ಹಾಗೂ ಅನಾವಶ್ಯಕವಾಗಿ ರಸ್ತೆಗಿಳಿದ ವಾಹನಗಳನ್ನು ವಶಕ್ಕೆ ಪಡೆಯುವ ಕಾರ್ಯಾಚರಣೆ ಇಂದು ಸಹ ನಡೆಯಿತು. ಜಿಲ್ಲೆಯಲ್ಲಿ ಮಾಸ್ಕ್ ಧರಿಸದ 399 ಮಂದಿಯಿಂದ ಒಟ್ಟು 94,350 ರೂ. ದಂಡ ವಿಧಿಸಲಾಗಿದೆ. ಅನಾವಶ್ಯಕ ರಸ್ತೆಗಿಳಿದ 179 ವಾಹನಗಳನ್ನು ಸೀಜ್ ಮಾಡಲಾಗಿದೆ.

## ಭಕ್ತಿಪೂರ್ವಕ ಪ್ರಣಾಮಗಳು



ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ತರಳಬಾಳು ಜಗದ್ಗುರು

**ಶ್ರೀ ಶ್ರೀ ಶ್ರೀ ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿಯವರಿಗೆ**

ಜನ್ಮ ದಿನದ ಭಕ್ತಿಪೂರ್ವಕ ಪ್ರಣಾಮಗಳು.

**ಗೌಡ್ರು ವಂಶಸ್ಥರು, ಆವರಗೆರೆ.**

## ಜನ್ಮ ದಿನದ ಶುಭಾಶಯಗಳು



ಅಭಿವೃದ್ಧಿಯ ಹರಿಕಾರರೂ, ಶಿಕ್ಷಣ ಪ್ರೇಮಿಗಳೂ, ಆಧುನಿಕ ಭಗೀರಥರೂ, ಅಜಾತಶತ್ರು ಮತ್ತು ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಗಳು, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರಾದ

**ಡಾ. ಶಾಮನೂರು ಶಿವಶಂಕರಪ್ಪ**

ಅವರಿಗೆ ಜನ್ಮದಿನದ ಶುಭಾಶಯಗಳು.

- H.V.Ramadas, Advocate
- M.S.Alakananda, Advocate
- H.V.Karthik
- Ankita Karthik
- H.V.Suman
- Dr. Lakshmi Rajeshwari
- H.V.Bhagavathi
- H.V.Rishi Sri Shankara
- G.S.Rajarao, Advocate
- K.S.Venkatesh, Advocate
- Megharaja K.H, Advocate
- M.S.Rajkumar, Advocate
- Prabhu, Advocate
- Siddappa G.R, Advocate
- Ramesh

**Harihara Veena Associates**

Sadguru, 2nd main road, P.J.Extn, Davangere

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 18.05.2021ರಂದು ನಿಧನರಾದ ತರಳಬಾಳು ಬಡಾವಣೆಯ ವಾಸಿ, ನಿವೃತ್ತ ಇಂಜಿನಿಯರ್ ದಿ|| ಆರ್. ಚಂದ್ರಶೇಖರ್ ಅವರ ಧರ್ಮಪತ್ನಿ

**ಶ್ರೀಮತಿ ಕೆ.ಆರ್. ಶಾರದಮ್ಮ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

- ಶ್ರೀಮತಿ ಜಿ.ಎನ್. ಮಹದೇವಮ್ಮ ಮತ್ತು ಸಿದ್ದಪ್ಪ, ಹಾಗೂ ಮಕ್ಕಳು ನಲ್ಕುದುರೆ.
- ಶ್ರೀಮತಿ ಶಾರದಮ್ಮ ದಿ|| ಜಿ.ಎನ್. ಸಿದ್ದಬಸಪ್ಪ ಮತ್ತು ಮಕ್ಕಳು
- ಅಳಿಯ : ಕೆ.ಎಸ್. ರವಿಶಂಕರ್
- ಪುತ್ರಿಯರು : ಶ್ರೀಮತಿ ಬಿಂದು ರವಿಶಂಕರ್, ಆರ್.ಸಿ. ಜ್ಯೋತಿ
- ಮೊಮ್ಮಕ್ಕಳು : ಕು|| ಶ್ರೇಯಾ, ಕು|| ಪ್ರಿಯಾ


ಅಣ್ಣಂದಿರಾದ :

- ಡಾ|| ಕೆ.ಆರ್. ಸೋಮಶೇಖರ್ ಮತ್ತು ಮಕ್ಕಳು
- ಶ್ರೀಮತಿ ಸುನಂದ ಮತ್ತು ಶ್ರೀ ಕೆ.ಆರ್. ಜಯದೇವಪ್ಪ, ರಾಜ್ಯಸಭಾ ಮಾಜಿ ಸದಸ್ಯರು
- ಶ್ರೀಮತಿ ಸುವರ್ಣ ಮತ್ತು ಶ್ರೀ ಕೆ.ಆರ್. ಸಿದ್ದಪ್ಪ, ನಿವೃತ್ತ ಉಪನ್ಯಾಸಕರು
- ಶ್ರೀಮತಿ ಶೋಭಾ ಮತ್ತು ಷಣ್ಮುಖಪ್ಪ ಮತ್ತು ಮಕ್ಕಳು
- ಶ್ರೀಮತಿ ಶಶಿಕಲಾ ಮತ್ತು ಶ್ರೀ ಪ್ರಭುಪ್ರಸಾದ್ ಮತ್ತು ಮಕ್ಕಳು, ಚಿತ್ರದುರ್ಗ.
- ಶ್ರೀಮತಿ ಸವಿತಾ ಮತ್ತು ಡಾ|| ವಿಜಯಕುಮಾರ್, ಆರ್ಥೋಪಿಡಿಕ್
- ಶ್ರೀಮತಿ ರೂಪಾಶ್ರೀ ಮತ್ತು ಶ್ರೀ ಕೆ.ಇ. ಪ್ರಕಾಶ್, ಚೇತನಾ ಫಾರ್ಮ
- ಶ್ರೀಮತಿ ಕುಸುಮಾ ಮತ್ತು ಶ್ರೀ ಎಸ್.ಬಿ. ನಟರಾಜ, ಕು|| ಮೇಘಾ
- ಶ್ರೀಮತಿ ಮಹಾದೇವಿ ಮತ್ತು ಶ್ರೀ ಸಿದ್ದನಗೌಡರ್
- ಶ್ರೀಮತಿ ಆಶಾ ಮತ್ತು ಶ್ರೀ ನಾಗರಾಜ ಡಿ.ಕೆ.
- ಕೂಲಂಬಿ ವಂಶಸ್ಥರು, ಗುಡ್ಡದರ ವಂಶಸ್ಥರು, ಮಳಲಕೆರೆ ಹಾಗೂ ಬಂಧು-ಮಿತ್ರರು.

## ಹುಟ್ಟುಹಬ್ಬದ ಶುಭಾಶಯಗಳು





91ರ ಸಂಭ್ರದಲ್ಲಿರುವ ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಗಳು,ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕರು, ಹಿರಿಯ ಮುತ್ಸದ್ದಿಗಳು, ಕೊಡುಗೈ ದಾನಿ, ಆತ್ಮೀಯರೂ ಆಗಿರುವ

**ಡಾ|| ಶಾಮನೂರು ಶಿವಶಂಕರಪ್ಪ**

ಅವರಿಗೆ ಜನ್ಮ ದಿನದ ಶುಭಾಶಯಗಳು.




- ಶ್ರೀಮತಿ ಅಮೃತ ವಿ. ಪಾಟೀಲ್
  ನಿರ್ದೇಶಕರು, ವೀರಶೈವ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ, ದಾವಣಗೆರೆ.
- ವಿಶ್ವನಾಥ್ ಬಿ. ಪಾಟೀಲ್
- ಅಮರೇಶ್ ವಿ. ಪಾಟೀಲ್
- ಡಾ. ಅರ್ಜುನ್ ವಿ. ಪಾಟೀಲ್
- ಅನೂಪ್ ವಿ. ಪಾಟೀಲ್

**ಶ್ರೀ ಅನ್ನಪೂರ್ಣೇಶ್ವರಿ ಜಿನ್ನಿಂಗ್ ಅಂಡ್ ಪ್ರೆಸ್ಸಿಂಗ್ ಇಂಡಸ್ಟ್ರಿ**

**ಅನ್ನಪೂರ್ಣೇಶ್ವರಿ ಡೆವಲಪರ್**

## ಕೈಲಾಸ ಶಿವಗಣಾರಾಧನೆ

ದಾವಣಗೆರೆ ಜಿ|| ನ್ಯಾಮತಿ ತಾ|| ಸವಳಂಗ ಗ್ರಾಮದ ವಾಸಿ



**ಶ್ರೀ ಲಕ್ಕವಳ್ಳಿ ಈಶ್ವರಪ್ಪನವರು**

(ಅಧ್ಯಕ್ಷರು, ಸಹ್ಯಾದ್ರಿ ವಿದ್ಯಾಸಂಸ್ಥೆ, ಸವಳಂಗ)

ದಿನಾಂಕ 13-06-2021ನೇ ಭಾನುವಾರ ಮಧ್ಯಾಹ್ನ ದೈವಾಧೀನರಾಗಿರುತ್ತಾರೆ ಆದ ಪ್ರಯುಕ್ತ ದಿನಾಂಕ : 17-06-2021ನೇ ಗುರುವಾರ ಬೆಳಿಗ್ಗೆ 11 ಗಂಟೆಗೆ ಕೈಲಾಸ ಶಿವಗಣಾರಾಧನೆಯನ್ನು ಸವಳಂಗ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಕುಟುಂಬಸ್ಥರು, ಸಹ್ಯಾದ್ರಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಹಾಗೂ ಶಿಕ್ಷಕ ವೃಂದ ಮತ್ತು ಸವಳಂಗ ಗ್ರಾಮಸ್ಥರು

ಕಲಿವೀರ ಸ್ಪೋರ್ಟ್ಸ್, ಪಿ.ಜೆ.ಬಡಾವಣೆ, ದಾವಣಗೆರೆ.

## ನಾಗೇಶ್ ಲಕ್ಷ್ಮಣ್ ಶೇಜ್‌ವಾಡ್‌ಕರ್ ನಿಧನ




ದಾವಣಗೆರೆ ವಿಜಯಲಕ್ಷ್ಮಿ ರಸ್ತೆ ರಾಧಿಕಾ ಜ್ಯೂಯಲರ್ಸ್ ಮತ್ತು ವಿಕಾಸ್ ಜ್ಯೂಯಲರ್ಸ್ ಮಾಲೀಕರಾದ **ಶ್ರೀ ನಾಗೇಶ್ ಲಕ್ಷ್ಮಣ್ ಶೇಜ್‌ವಾಡ್‌ಕರ್** ಅವರು ದಿನಾಂಕ 16.06.2021ರ ಬುಧವಾರ ಮಧ್ಯಾಹ್ನ 3.44 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೂವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 16.06.2021ರ ಬುಧವಾರ ಸಂಜೆ ವೈಕುಂಠ ಧಾಮದಲ್ಲಿ ನೆರವೇರಿಸಲಾಯಿತು.

ದುಃಖತಪ್ತ ಕುಟುಂಬ ವರ್ಗ

ಮಕ್ಕಳು, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಮತ್ತು ಬಂಧು-ಮಿತ್ರರು.

|| ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಪ್ರಸನ್ನ ||



## ಜನ್ಮದಿನದ ಶುಭಾಶಯಗಳು



ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿಯ ಅನನ್ಯ ಭಕ್ತರು, ಕೊಡುಗೈ ದಾನಿಗಳು, ದಾವಣಗೆರೆ ನಗರವನ್ನು ಶಿಕ್ಷಣ ಕಾಶಿಯನ್ನಾಗಿಸಿರುವ ಮಹಾನ್ ನಾಯಕ, ನುಡಿದಂತೆ ನಡೆವ, ಇಂದಿನ ಕೊರೊನಾ ಸೋಂಕಿಗೆ ಕೋವಿಡ್-19 ಲಸಿಕೆಯನ್ನು ತಮ್ಮ ಸ್ವಂತ ಹಣದಿಂದ ನಮ್ಮ ನಗರಕ್ಕೆ ತರಿಸಿ, ದಾವಣಗೆರೆ ನಗರದ ಜನತೆಗೆ ಉಚಿತವಾಗಿ ನೀಡುತ್ತಿರುವ ಧೀಮಂತ ನಾಯಕ ಹಾಗೂ ನಮ್ಮ ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷರೂ ಆದ, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರು, ಮಾಜಿ ಸಚಿವರೂ ಆದ, ನಮ್ಮೆಲ್ಲರಿಗೂ ಹಿರಿಯ ಸಹೋದರರಂತೆ ಇರುವ,

**ಶ್ರೀಯುತ ಡಾ|| ಶಾಮನೂರು ಶಿವಶಂಕರಪ್ಪ**

ಅವರಿಗೆ 90 ನೇ ಜನ್ಮದಿನದ ಶುಭಾಶಯಗಳು.

ಇವರಿಗೆ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿಯು ಇನ್ನೂ ಆಯುರಾರೋಗ್ಯ ನೀಡಿ, ಶತಾಯುಷಿಗಳಾಗಿ ಇನ್ನೂ ಹೆಚ್ಚಿನ ಸಮಾಜ ಸೇವೆ ಮಾಡಲು ಶ್ರೀ ಸ್ವಾಮಿಯು ಕರುಣಿಸಲೆಂದು ಶುಭ ಹಾರೈಸುತ್ತೇವೆ.

| ಅಧ್ಯಕ್ಷರು : | ಉಪಾಧ್ಯಕ್ಷರುಗಳು : | ಪ್ರಧಾನ ಕಾರ್ಯದರ್ಶಿಗಳು : |
|---|---|---|
| ಮಾಗಾನಹಳ್ಳಿ ಶಿವಾನಂದಪ್ಪ | ಮಾಗಾನಹಳ್ಳಿ ಜಯದೇವಪ್ಪ<br>ಡಾ. ಎಸ್.ಬಿ. ಮುರುಗೇಶ್ | ಅಥಣಿ ಎಸ್. ವೀರಣ್ಣ |

ಸಹ ಕಾರ್ಯದರ್ಶಿಗಳು : ಬಾದಾಮಿ ರುದ್ರೇಶ್ ಮತ್ತು ಸರ್ವ ಸದಸ್ಯರುಗಳು

**ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಸೇವಾ ಸಂಘ (ರಿ.)**

**ಶ್ರೀ ಗುರು ಬಕ್ಕೇಶ್ವರ ಮಹಾಸ್ವಾಮಿ ರಥೋತ್ಸವ ಕಮಿಟಿ**

ಚೌಕಿಪೇಟೆ, ದಾವಣಗೆರೆ-1.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte